# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (RWBCIS) ಅಡಿ 2025-26 ರ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಯೋಜನೆ ಅನುಷ್ಠಾನ (ವಿಮಾಘಟಕ-ಬೆಳೆಗಳ ಸಂಯೋಜನೆ, ಟರ್ಮ್ ಶೀಟ್, ಪ್ರೀಮಿಯಂ ದರ ಇತ್ಯಾದಿ) ಕುರಿತು ಅಧಿಸೂಚಿಸುವ ಬಗ್ಗೆ.

ಓದಲಾಗಿದೆ:

1. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯ ಕೇಂದ್ರ ಸರ್ಕಾರದ ಪರಿಷ್ಕೃತ ಮಾರ್ಗಸೂಚಿ-2023
2. Operational Guidelines, Restructured Weather Based Crop Insurance Scheme (RWBCIS)(Revised).
3. ಸರ್ಕಾರದ ಆದೇಶದ ಸಂಖ್ಯೆ:ತೋಇ/36/ತೋಸವಿ/2016, ದಿನಾಂಕ:03-03-2016 DLTC Committee.
4. RWBCIS Premium (6 ಜಿಲ್ಲೆಗಳು) GO No:ತೋಇ 676 ತೋಸವಿ 2022 Bengaluru Date:04-07-2023.
5. RWBCIS implementation (6ಜಿಲ್ಲೆಗಳು) GO No:ತೋಇ 676 ತೋಸವಿ 2022 Bengaluru Date:06-07-2023..
6. RWBCIS Premium (23 ಜಿಲ್ಲೆಗಳು) GO No:ತೋಇ 676 ತೋಸವಿ 2023 Bengaluru Date:19-07-2023
7. RWBCIS implementation (23 ಜಿಲ್ಲೆಗಳು) GO No:ತೋಇ 676 ತೋಸವಿ 2023 Bengaluru Date:19-07-2023.
8. RWBCIS Premium (2 ಜಿಲ್ಲೆಗಳು) GO No:ತೋಇ 676 ತೋಸವಿ 2022 Bengaluru Date:19-08-2023.
9. RWBCIS implementation (2ಜಿಲ್ಲೆಗಳು) GO No:ತೋಇ 676 ತೋಸವಿ 2022 Bengaluru Date:19-08-2023.
10. ಸರ್ಕಾರದ ಆದೇಶ ಸಂಖ್ಯೆ: HORTI /676/HGM/2022, ದಿನಾಂಕ:26.06.2024
11. ದಿನಾಂಕ:06-02-2023, 21-09-2023 & 03.03.2025 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ ಸಭೆಯ ನಡವಳಿಗಳು.
12. ಸರ್ಕಾರದ ಆದೇಶ ಸಂಖ್ಯೆ: HORTI 231 HGM 2024, ದಿನಾಂಕ: 13.06.2024.

13. ಸರ್ಕಾರದ ಆದೇಶ ಸಂಖ್ಯೆ: HORTI 231 HGM 2024, ದಿನಾಂಕ: 21.06.2025.

14. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 213 ವೆಚ್ಚ-4/2023, ದಿನಾಂಕ:11.06.2025

15. ತೋಟಗಾರಿಕೆ ನಿರ್ದೇಶನಾಲಯದ ಪತ್ರ ಸಂಖ್ಯೆ: DH-HEG0HEGT/51/2025, ದಿನಾಂಕ:16.06.2025.

*****

ಪ್ರಸ್ತಾವನೆ:

ಕೇಂದ್ರವಲಯ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ [Pradhan Mantri Fasal Bima Yojana (PMFBY)] ಹಾಗೂ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗಳನ್ನು [Restructured Weather Based Crop Insurance Scheme (RWBCIS)] 2016-17 ನೇ ಸಾಲಿನ ಮುಂಗಾರಿನಿಂದ ಮೇಲೆ ಓದಲಾದ (1) ಹಾಗೂ (2)ರ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ.

2. ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು ಕೃಷಿ ಇಲಾಖೆ ಮತ್ತು ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ತೋಟಗಾರಿಕೆ ಇಲಾಖೆ ಅನುಷ್ಠಾನಗೊಳಿಸುತ್ತಿದೆ.

3. ಮೇಲೆ ಓದಲಾದ (3) ರ ಆದೇಶದಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ ಟರ್ಮ್‌ಶೀಟ್ ಗಳನ್ನು ತಯಾರಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ (DLTC) ಯನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ.

4. ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS)ಯನ್ನು 2023-24 ಹಾಗು 2024-25 ನೇ ಸಾಲಿಗೆ ಮುಂಗಾರು ಮತ್ತು ಹಿಂಗಾರು ಹಂಗಾಮುಗಳ ಅವಧಿಗೆ ವಿವಿಧ ತೋಟಗಾರಿಕೆ ಬೆಳೆಗಳಿಗೆ ಅಂತಿಮಗೊಳಿಸಲಾದ ಟರ್ಮ್ ಶೀಟ್ ಗಳು, ರಿಸ್ಕ್ ಅವಧಿಯ ಪ್ರಾರಂಭ ಮತ್ತು ಮುಕ್ತಾಯದ ವಿವರ, ಬೆಳೆವಾರು ಒಟ್ಟು ವಿಮೆ ಮೊತ್ತ (Sum Insured), ಜಿಲ್ಲಾವಾರು-ಬೆಳೆವಾರು ಒಟ್ಟು ಪ್ರೀಮಿಯಂ ಮೊತ್ತ ಹಾಗೂ ರೈತರ ವಿಮಾ ಮೊತ್ತ, ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮ ಪಂಚಾಯಿತಿ/ವಿಮಾಘಟಕಗಳ ಸಂಖ್ಯೆ ಹಾಗೂ ಬೆಳೆಗಳ ವಿವರ, ನಿರ್ಧಿಷ್ಟ ಸ್ಥಳ, ಪ್ರಕೃತಿ ವಿಕೋಪಗಳ ರಿಸ್ಕ್ ಅವಧಿ, ನೀರಾವರಿ ಮತ್ತು ಮಳೆಯಾಶ್ರಿತ ಜಿಲ್ಲೆಗಳ ವಿವರಗಳುಳ್ಳ ಹಾಗೂ ಜಿಲ್ಲಾವಾರು, ತಾಲ್ಲೂಕುವಾರು ವಿಮಾಘಟಕಗಳು - ಬೆಳೆಗಳ ಸಂಯೋಜನೆಗಳನ್ನು ಅನುಬಂಧಗಳೊಂದಿಗೆ ಮೇಲೆ ಓದಲಾದ (4) ರಿಂದ (10) ರ ಆದೇಶಗಳನ್ವಯ ಅಧಿಸೂಚಿಸಲಾಗಿರುತ್ತದೆ.

5. ಮೇಲೆ ಓದಲಾದ (11)ರ ನಡವಳಿಯಂತೆ ರಾಜ್ಯಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿಯಿಂದ ಈ ಮುಂದಿನ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

A. ಯೋಜನೆಯ ಮಾರ್ಗಸೂಚಿಯನ್ವಯ ಕೇಂದ್ರ ಸರ್ಕಾರ ಎಂಪ್ಯಾನಲ್ ಮಾಡಿರುವ ಬೆಳೆವಿಮಾ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಿ ಮೂರು ವರ್ಷದ ಅವಧಿಗೆ ಆಯ್ಕೆ ಮಾಡುವುದು.

B. ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (RWBCIS) ಮತ್ತು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಗಳಡಿ (PMFBY) ಈ ಹಿಂದೆ ಅಧಿಸೂಚಿತ ವಿಮಾಘಟಕಗಳಲ್ಲಿ ಸ್ವಯಂಚಾಲಿತ ಹವಾಮಾನ/ಮಳೆ ಮಾಪನ ಕೇಂದ್ರದಿಂದ ಕಾರಣಾಂತರಗಳಿಂದ ಮಳೆ/ಹವಾಮಾನ ದತ್ತಾಂಶಗಳು ಲಭ್ಯವಾಗದಿದ್ದಲ್ಲಿ, ಅಲ್ಲಿಯೇ ಆ ಹೋಬಳಿ / ಗ್ರಾಮ ಪಂಚಾಯತಿ / ವಿಮಾ ಘಟಕದ ಸಮೀಪದಲ್ಲಿ ಗುರುತಿಸಲಾದ ಪರ್ಯಾಯ ಸ್ವಯಂ ಚಾಲಿತ ಹವಾಮಾನ / ಮಳೆ ಮಾಪನ ಕೇಂದ್ರದ ಮಾಹಿತಿಯನ್ನು (ಬ್ಯಾಕ್ ಅಪ್ ಕೇಂದ್ರ 1&2) ಪರಿಗಣಿಸಬೇಕಾಗಿರುವ ನವೀಕೃತ (updated) ಕೇಂದ್ರಗಳನ್ನು KSNDMC ನೀಡುವ ಮಾಹಿತಿ ಆಧಾರದ ಮೇರೆಗೆ ಅಧಿಸೂಚಿಸಬೇಕಾಗಿದೆ. ಅದರಂತೆ ಮೇಲೆ ಓದಲಾದ (12) ರ ಆದೇಶದನ್ವಯ 2023-24ನೇ ಸಾಲಿಗೆ ಅನುವಾಗುವಂತೆ ಅಧಿಸೂಚಿಸಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (13) ರ ಆದೇಶದಲ್ಲಿ 2024-25 ಮತ್ತು 2025-26ನೇ ಸಾಲಿಗೂ ಪರಿಗಣಿಸಬೇಕಾಗಿರುವ ನವೀಕೃತ (updated) ಕೇಂದ್ರಗಳನ್ನು ಅಧಿಸೂಚಿಸಿ ಆದೇಶ ಹೊರಡಿಸಲಾಗಿದೆ.

C. **ಬೆಳೆಗಳ ಅನುಷ್ಠಾನದ ಕುರಿತು** ತೋಟಗಾರಿಕೆ ಬೆಳೆಗಳಾದ ಹಸಿರುಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವೀಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ನಿಂಬೆ, ಮಾವು, ಪರಂಗಿ ಮತ್ತು ಶುಂಠಿ ಬೆಳೆಗಳನ್ನು (ಒಟ್ಟಾರೆ - 11 ಬೆಳೆಗಳು) ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ.

D. **ನೋಂದಣಿ ಅಂತಿಮ ದಿನಾಂಕ:** 2025-26ನೇ ಸಾಲಿಗೆ ತೋಟಗಾರಿಕೆ ಬೆಳೆಗಳಿಗೆ ನೋಂದಾಯಿಸಲು ಅಂತಿಮ ದಿನಾಂಕವು ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ಒಂದೇ ಆಗಿರುತ್ತದೆ. ಜಿಲ್ಲಾವಾರು/ಹಂಗಾಮುವಾರು ಅಧಿಸೂಚಿತ ಬೆಳೆಗಳ ನೋಂದಣಿ ಅಂತಿಮ ದಿನಾಂಕವು ಬೇರೆ ಬೇರೆ ಇದ್ದು, ವಿವರವು ಅನುಬಂಧ-3 ರಲ್ಲಿ ಇರುತ್ತದೆ.

E. **ಪ್ರೀಮಿಯಂ ಗರಿಷ್ಠ ಮಿತಿಯ ಕುರಿತು:** ಕೇಂದ್ರ ಸರ್ಕಾರದ ಮಾರ್ಗಸೂಚಿಯ ಕಂಡಿಕೆ 13 ರಲ್ಲಿ ಕೇಂದ್ರ ಸರ್ಕಾರವು ನೀರಾವರಿ ಜಿಲ್ಲೆ (ಬಾಗಲಕೋಟೆ, ರಾಯಚೂರು, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಮಂಡ್ಯ) ಗಳಿಗೆ ಶೇ.25 ಮತ್ತು ಮಳೆ ಆಶ್ರಿತ ಜಿಲ್ಲೆಗಳಿಗೆ ಶೇ.30ರಷ್ಟು ಪ್ರೀಮಿಯಂ ಮಿತಿ ನಿಗದಿಪಡಿಸಿದೆ. ಇದಕ್ಕಿಂತ ಅಧಿಕ ಪ್ರೀಮಿಯಂ ನಮೂದಿಸಿದ ಜಿಲ್ಲೆ-ಬೆಳೆ ಸಂಯೋಜನೆಗಳನ್ನು ಅಧಿಸೂಚನೆಯಿಂದ ಕೈಬಿಡಬೇಕಾಗುತ್ತದೆ ಅಥವಾ ಹೆಚ್ಚುವರಿ ಪ್ರೀಮಿಯಂ ಅನ್ನು ರಾಜ್ಯ ಸರ್ಕಾರವು ಸಂಪೂರ್ಣವಾಗಿ ಭರಿಸಬೇಕಾಗಿರುತ್ತದೆ. ಕೇಂದ್ರ ಸರ್ಕಾರವು ನಿಗದಿಪಡಿಸಿದ ಪ್ರೀಮಿಯಂ ಮಿತಿಗಿಂತ ಅಧಿಕವಾದ ಮೊತ್ತವನ್ನು ರಾಜ್ಯ ಸರ್ಕಾರವು ಶೇಕಡ 10 ರವರೆಗೆ ಹೆಚ್ಚುವರಿ ಹೊರೆಯಾಗಿ ಭರಿಸಲು ಮತ್ತು ಶೇಕಡ10ಕ್ಕಿಂತ ಹೆಚ್ಚಿನ ಮೊತ್ತವನ್ನು ರೈತರು ಭರಿಸಲು ತೀರ್ಮಾನಿಸಲಾಗಿರುತ್ತದೆ.

F. **ಸಾಮಾನ್ಯ ಸೇವಾ ಕೇಂದ್ರ (Common Service Centres-CSC)/ ಗ್ರಾಮ ಒನ್ (Grama One) ಗಳ ಸೇವಾ ಶುಲ್ಕದ ಕುರಿತು** ಕೇಂದ್ರ ಸರ್ಕಾರದ ಸೂಚನೆಯಂತೆ ಸಾಮಾನ್ಯ ಸೇವಾ ಕೇಂದ್ರ/ ಗ್ರಾಮ ಒನ್ ಗಳಲ್ಲಿ ನೋಂದಾಯಿಸಿದ ಬೆಳೆ ಸಾಲ ಪಡೆಯದ ರೈತರ ವಿವರಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ದಾಖಲಿಸಲು ಹಾಗೂ ಸಂರಕ್ಷಣೆ ತಂತ್ರಾಂಶ ನೋಂದಣಿಯ ಪ್ರಕಾರ ಒಂದು ಅರ್ಜಿಗೆ ಸೇವಾ ಶುಲ್ಕವನ್ನು ವಿಮಾ ಸಂಸ್ಥೆಯು ಸಾಮಾನ್ಯ ಸೇವಾ ಕೇಂದ್ರ/ ಗ್ರಾಮಾ ಒನ್ ಕೇಂದ್ರಗಳಿಗೆ ನೀಡುವುದು.

G. **ಬೆಳೆ ಸಮೀಕ್ಷೆಯ ಮಾಹಿತಿಯ ಆಧಾರದ ಮೇಲೆ ದೀರ್ಘಕಾಲಿಕ ಬೆಳೆಗಳ ದಾಖಲಾತಿ ಕುರಿತು,** ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ನೋಂದಣಿಗೆ ಬಹುವಾರ್ಷಿಕ ಬೆಳೆಗಳು ನಂತರದ ಋತುಗಳಲ್ಲಿ/ ವರ್ಷಗಳಲ್ಲಿ ಸಾಮಾನ್ಯವಾಗಿ ಬದಲಾಗುವುದಿಲ್ಲವಾದ್ದರಿಂದ, ದಾಖಲಾತಿ ಸಮಯದಲ್ಲಿಯೇ ಹಿಂದಿನ ವರ್ಷಗಳು/ ಋತುಗಳ ಬೆಳೆ ಸಮೀಕ್ಷೆಯ ಪ್ರಕಾರ ಬೆಳೆ ಕಂಡುಬಂದರೆ ಮಾತ್ರ ದೀರ್ಘಕಾಲಿಕ ಬೆಳೆಗಳಿಗೆ ದಾಖಲಾತಿಯನ್ನು ಅನುಮತಿಸಲು ಮತ್ತು ಬೆಳೆ ಸಮೀಕ್ಷೆಯ ಮಾಹಿತಿಯ ಪ್ರಕಾರ ದೀರ್ಘಕಾಲಿಕ ಬೆಳೆ ಕಂಡುಬರದಿದ್ದರೆ, ದಾಖಲಾತಿಯನ್ನು ಅನುಮತಿಸಲಾಗುವುದಿಲ್ಲ. ಇದು ನಂತರ ಬೆಳೆ ಸಮೀಕ್ಷೆ ಬೆಳೆಯೊಂದಿಗೆ ವಿಮೆ ಮಾಡಿದ ಬೆಳೆಯನ್ನು ಹೋಲಿಸುವ ಅಗತ್ಯವನ್ನು ತಪ್ಪಿಸುತ್ತದೆ ಎಂದು ತೀರ್ಮಾನಿಸಲಾಗಿರುತ್ತದೆ.

H. **Area Correction Factor (ACF)** ಅಳವಡಿಕೆ ಕುರಿತು, ರಾಜ್ಯದಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳುತ್ತಲಿದ್ದು, ಬೆಳೆ ಸಮೀಕ್ಷೆಯ ಸಮಯದಲ್ಲಿ ಕಂಡುಬರುವ ಬೆಳೆಗಳೊಂದಿಗೆ ವಿಮೆ ಮಾಡಿದ ಬೆಳೆಯನ್ನು ಹೋಲಿಸುವ ಮೂಲಕ ಪ್ರತಿ ಪ್ರಸ್ತಾವನೆಯನ್ನು ಸಿಂಧುವೆಂದು ಕಂಡುಬಂದ ಪ್ರಸ್ತಾವನೆಗಳಿಗೆ ಅರ್ಹ ವಿಮಾ ಪರಿಹಾರ ಪಾವತಿಸಲಾಗುತ್ತಿದೆ. ಬೆಳೆ ಸಮೀಕ್ಷೆಯ ವಿವರಗಳನ್ನು ಬಳಸುವಲ್ಲೆಲ್ಲಾ ಪ್ರದೇಶ ತಿದ್ದುಪಡಿ ಅಂಶವನ್ನು (ACF) ಅನ್ವಯಿಸಲಾಗುವುದಿಲ್ಲ. ಬೆಳೆ ಸಮೀಕ್ಷೆಯನ್ನು ಕೈಗೊಳ್ಳದಿದ್ದಲ್ಲಿ ಪರಿಷ್ಕರಿಸಿದ PMFBY ಮಾರ್ಗಸೂಚಿಗಳ ಪ್ರಕಾರ ACF ಅನ್ನು ಅನ್ವಯಿಸಲಾಗುತ್ತದೆ.

I. ಸಂರಕ್ಷಣೆಯೊಂದಿಗೆ FRUITS ತಂತ್ರಾಂಶದ ಏಕೀಕರಣ ಕುರಿತು, ಬೆಳೆ ವಿಮೆ ಅಡಿಯಲ್ಲಿ ದಾಖಲಾತಿಗಾಗಿ FRUITS ತಂತ್ರಾಂಶದಲ್ಲಿ ರೈತರ ನೋಂದಣಿ ಕಡ್ಡಾಯವಾಗಿರಬೇಕೆಂದು ತೀರ್ಮಾನಿಸಲಾಗಿರುತ್ತದೆ

J. ಬೆಳೆ ಸಮೀಕ್ಷೆ ಬೆಳೆಯನ್ನು ವಿಮೆ ಮಾಡಿದ ಬೆಳೆಯೊಂದಿಗೆ ಹೋಲಿಸಲು ಸಂಬಂಧಿಸಿದ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಸಮಯವನ್ನು ಈ ಮುಂದಿನಂತೆ ನಿಗದಿಪಡಿಸಿ ತೀರ್ಮಾನಿಸಲಾಗಿರುತ್ತದೆ.

| ಕ್ರ.ಸಂ | ಬೆಳೆ ಸಮೀಕ್ಷೆ ಬೆಳೆಯೊಂದಿಗೆ ವಿಮೆ ಮಾಡಿದ ಬೆಳೆಯನ್ನು ಹೋಲಿಸಲು ಸಂಬಂಧಿಸಿದ ಚಟುವಟಿಕೆಗಳು | ಕಾಲಮಿತಿ | ಷರಾ |
|---|---|---|---|
| 1 | Providing related masters from the departments (Agriculture and Horticulture) | Kharif- By July end<br>Rabi – By November end<br>Summer- By February end | If not provided within the time line previous year's corresponding season's masters shall be used |
| 2 | Electronic integration of Samrakshane with crop survey data - District wise and crop wise. | Within one month from completion of crop survey for respective season (Subject to providing of relevant masters) = T1. | |

| | | | |
|---|---|---|---|
| 3 | Running integration process - District wise and Crop wise (Agriculture and Horticulture departments) | T1 + 15 days = T2 | |
| 4 | Pushing of mismatch cases to verifiers by respective insurance company | T2 + 7 days = T3 | If not completed within the timeline auto pushed to verifier. |
| 5 | Completion of crop survey verification by the verifier based on crop photo (loanee - Banker and Non Loanee - taluk officers). | T3 + 15 days = T4 | If not completed within the timeline such proposals are considered to be "Recommended for rejection" and auto-pushed to Insurance Company login for rejection. |
| 6 | Field verification for perennial crops – case by case. | T4 + 30 days = T5 | If not completed within the timeline such proposals are considered to be "Recommended for rejection" and auto-pushed to Insurance Company login for rejection. |
| 7 | Accept/Rejection of crop survey verified applications by Insurance Company from the day of receipt from verifier login (loanee – from Banker and Non Loanee – from taluk officers) – case by case. | T4 + 7 days in case of Annuals and T5 + 7 days in case of perennial crops = T6 | If not completed within the timeline such proposals are considered to be accepted as per the recommendation of verifier (Proposal Accepted in case of recommended for acceptance and rejected in case of recommended for rejection). |
| 8 | Display of rejected cases in notice board. | T6 + 3 days =T7 | |
| 9 | The timeline to submit the complaint by farmer after the display of list of rejected applications from IC in taluk offices – case by case. | T7+ 15 days =T8 | If not submitted within time line considered as there is no complaint |
| 10 | Disposal of complaint from taluk committee– case by case. | T8 + 15 days =T9 | |

| | | | |
|---|---|---|---|
| 11 | Appeal to district Committee by farmers / insurance company– case by case. | T9+7 days=T10 | If not done in time considered as no appeal. |
| 12 | Disposal of appeal by district committee – case by case. | T10+15 days =T11 | |
| 13 | Accept/ Rejection of crop survey verified applications by Taluka officers based on committee's decision– case by case | T11 + 3 days = T12 | |
| 14 | The timeline for claim initiation by the department for crop survey verified clear cases (accepted cases) after the receipt by Insurance Company - case by case. | T6 + 3 days and T12 + 3 days in case of appealed cases = T 13. | |
| 15 | Claim settlement by Insurance Company – case by case | T 13 + 7 days | |

6. ಯೋಜನೆಯ ಮಾರ್ಗಸೂಚಿಯನ್ವಯ ಬ್ಯಾಂಕಿನಲ್ಲಿ ಸಾಲ ಮಂಜೂರಾದ ಎಲ್ಲಾ ರೈತರನ್ನು ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುವುದು. ಬೆಳೆ ಸಾಲ ಪಡೆದ ರೈತರು ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದೇ ಇದ್ದಲ್ಲಿ ಸಂಬಂಧಿಸಿದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ ಏಳು(7) ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಯೋಜನೆಯಿಂದ ಕೈಬಿಡಲು ಅವಕಾಶವಿರುತ್ತದೆ. ಸಂಬಂಧಿಸಿದ ಬ್ಯಾಂಕ್ ಗಳು ಈ ರೀತಿ ಸ್ವೀಕರಿಸಲಾದ ಮುಚ್ಚಳಿಕೆ ಪತ್ರಗಳನ್ನು ದಾಖಲೆಗಳೊಂದಿಗೆ ವ್ಯವಸ್ಥಿತವಾಗಿ ನಿರ್ವಹಿಸಬೇಕಾಗಿರುತ್ತದೆ.

7. ಅನುಷ್ಠಾನ ವಿಮಾ ಸಂಸ್ಥೆಗಳು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು 2025-26ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಅಧಿಸೂಚಿಸಲಾದ ಬೆಳೆ ಮತ್ತು ಹಂಚಿಕೆಯಾದ ಗುಚ್ಛದಲ್ಲಿನ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುವುದು.

8. ಬ್ಯಾಂಕುಗಳು ವಿಮೆ ಮಾಡಿಸಿದ ರೈತರ ಎಲ್ಲಾ ವಿವರಗಳನ್ನುಳ್ಳ ಪ್ರಸ್ತಾವನೆಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಅಳವಡಿಸಿ ವಿಮಾ ಸಂಸ್ಥೆಗಳಿಗೆ ಸಲ್ಲಿಸುವುದು. ವಿವರಗಳನ್ನು ಸಲ್ಲಿಸಿದ ನಂತರ ಬ್ಯಾಂಕುಗಳಿಗೆ ವಿಮಾ ಸಂಸ್ಥೆಗಳು ರೈತರ ವಿಮಾ ಕಂತಿನ ಮೊತ್ತದ ಶೇಕಡ 4 ರ ಸೇವಾ ಶುಲ್ಕವನ್ನು ಬಿಡುಗಡೆ ಮಾಡುವುದು.

9. ಅನುಷ್ಠಾನ ವಿಮಾ ಸಂಸ್ಥೆಗಳು ಇಲಾಖೆ ನಿಗದಿಪಡಿಸಿದ ವಿಮಾ ಮೊತ್ತ, ವಿಮಾ ಕಂತಿನ ದರಗಳ ಹಾಗೂ ಬೆಳೆ ವಿಮಾ ನಷ್ಟ ಪರಿಹಾರದ ಹಂತ (Payout Structures) ಗಳ ಪ್ರಕಾರ ನಿಯಮಾನುಸಾರ ಬೆಳೆ ವಿಮೆ ಪರಿಹಾರ ನೀಡುವುದು.

10. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ರೈತರ ಖಾತೆಗೆ ಜಮಾ ಮಾಡಿದ ವಿವರಗಳು "ಸಂರಕ್ಷಣೆ ತಂತ್ರಾಂಶದಲ್ಲಿ ಸಂಬಂಧಪಟ್ಟವರು ಪರಿಶೀಲಿಸಿಕೊಳ್ಳಲು ಲಭ್ಯವಿರುತ್ತದೆ".

11. ಬ್ಯಾಂಕುಗಳು ಸಿ.ಎಸ್.ಸಿ. ಗಳು ಮತ್ತು ಗ್ರಾಮ ಒನ್ ಗಳು ರೈತರ ದಾಖಲಾತಿಗಾಗಿ ಸಂರಕ್ಷಣೆ ಪೋರ್ಟಲ್ ಅನ್ನು ಬಳಸುತ್ತವೆ ಮತ್ತು ನಂತರ ಹಣವನ್ನು ವಿಮಾ ಸಂಸ್ಥೆಯ ಖಾತೆಗೆ ವರ್ಗಾಯಿಸುತ್ತವೆ. ಸಂರಕ್ಷಣೆ ಪೋರ್ಟಲ್ ಅನ್ನು ಕೇಂದ್ರ ಸರ್ಕಾರದ ಪ್ರಾಯೋಜಿತ ಪೇಮೆಂಟ್ ಗೇಟ್ ವೇ (Payment gateway) "ಪೇ-ಗೋವ್" (Pay-Gov) ನೊಂದಿಗೆ ಸಂಯೋಜಿಸಲಾಗಿದೆ. ಪೇಮೆಂಟ್ ಗೇಟ್‌ವೇ ಅನ್ನು ಎನ್.ಎಸ್.ಡಿ.ಎಲ್ ಡೇಟಾಬೇಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್ (ಎನ್‌ಡಿ.ಎಂ.ಎಲ್/NDML) ನಿರ್ವಹಿಸುತ್ತದೆ. ಈ ಸೇವೆಯನ್ನು ಬಳಸಿಕೊಂಡು ಮಾಡಿದ ವಹಿವಾಟಿಗೆ ಎನ್.ಡಿ.ಎಂ.ಎಲ್ ಶುಲ್ಕವನ್ನು ನಿಗದಿಪಡಿಸಿದೆ. ಆದ್ದರಿಂದ, ಅನ್ವಯವಾಗುವ ತೆರಿಗೆಯೊಂದಿಗೆ ಪ್ರತಿ ವಹಿವಾಟಿನ ಪೇಮೆಂಟ್ ಗೇಟ್‌ವೇ ಶುಲ್ಕವನ್ನು ವಿಮಾ ಸಂಸ್ಥೆಗಳು ಭರಿಸಬೇಕಾಗುತ್ತದೆ. ಪೇ-ಗೋವ್ ಮೂಲಕ ಬ್ಯಾಂಕರ್‌ಗಳು ಎನ್.ಡಿ.ಎಂ.ಎಲ್ ಗೆ ಪಾವತಿ ಮಾಡಿದ ನಂತರ, ಈ ಮೊತ್ತವನ್ನು ಆಯಾ ಕಂಪನಿಗಳಿಗೆ ವರ್ಗಾಯಿಸಲು ಎನ್.ಡಿ.ಎಂ.ಎಲ್ ಕೆಲವು ಸಮಯ ತೆಗೆದುಕೊಳ್ಳುತ್ತದೆ, ಪೇ-ಗೋವ್ ಸಾಮಾನ್ಯವಾಗಿ ವ್ಯವಹಾರದ ದಿನಾಂಕದ 2 ದಿನಗಳಲ್ಲಿ (ಟಿ + 2 ದಿನಗಳು) ಮೊತ್ತವನ್ನು ಸಂಬಂಧಪಟ್ಟ ವಿಮಾ ಸಂಸ್ಥೆಗೆ ವರ್ಗಾಯಿಸುತ್ತದೆ. ವಿಮಾ ಸಂಸ್ಥೆಗಳಿಗೆ ಪ್ರೀಮಿಯಂ ಸಲ್ಲಿಸುವ ಕೊನೆಯ ದಿನಾಂಕವು ನಿಗದಿಯಾಗಿದ್ದರಿಂದ, ಬ್ಯಾಂಕರ್‌ನಿಂದ ಎನ್.ಡಿ.ಎಂ.ಎಲ್ ಗೆ ಪೇ-ಗೋವ್ ಮೂಲಕ ಪ್ರೀಮಿಯಂ ಪಾವತಿಯನ್ನು ವಿಮಾ ಸಂಸ್ಥೆಗಳಿಗೆ ಪಾವತಿಯಾಗಿ ಪರಿಗಣಿಸಬೇಕಾಗಿದೆ. ಪೇ-ಗೋವ್ ಮರುಹೊಂದಾಣಿಕೆ ವರದಿಯು ಸಂರಕ್ಷಣೆಯಲ್ಲಿ ವಿಮಾ ಸಂಸ್ಥೆ ಮತ್ತು ಬ್ಯಾಂಕರ್‌ಗಳಿಗೆ ಲಭ್ಯವಿದ್ದು, ನಿಗದಿತ ಸಮಯದ ಮಿತಿಯೊಳಗೆ ಅಥವಾ ವಿಸ್ತೃತ ಎಲ್ಲಾ ಮಧ್ಯಸ್ಥಗಾರರಿಂದ ಒಪ್ಪಲ್ಪಟ್ಟಂತೆ ಸಮಯ ಮಿತಿಯೊಳಗೆ ಸಂರಕ್ಷಣೆ ಮೂಲಕ ರವಾನಿಸಲಾದ ಪ್ರಸ್ತಾವನೆಗಳ ಉಳಿಕೆ ಮೊತ್ತ ಇದ್ದಲ್ಲಿ ಪ್ರೀಮಿಯಂನ (ಮುಖ್ಯವಾಗಿ ತಾಂತ್ರಿಕ ತೊಂದರೆಗಳಿಂದಾಗಿ) ಬೆಳೆವಿಮಾ ಸಂಸ್ಥೆಗಳು ಪೇ-ಗೋವ್ ಮತ್ತು ಆಯಾ ಬ್ಯಾಂಕ್ ಶಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪ್ರಸ್ತಾವನೆ ಸ್ವೀಕರಿಸಿದ 15 ದಿನಗಳೊಳಗಾಗಿ ಅಥವಾ ಪ್ರಸ್ತಾವನೆ ಸ್ವೀಕರಿಸಲು ನಿಗದಿಪಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಉಳಿಕೆ ಮೊತ್ತವನ್ನು ಸ್ವೀಕರಿಸಬೇಕು. ಆಯಾ ಕಂಪನಿಗಳಿಗೆ ಮೊತ್ತವನ್ನು ವರ್ಗಾವಣೆ ಮಾಡುವಲ್ಲಿ ಎನ್‌ಡಿಎಂಎಲ್ (ಪೇ-ಗೋವ್) ಮಾಡುವ ಯಾವುದೇ ವಿಳಂಬ ಅಥವಾ ಬ್ಯಾಂಕರ್ ಎನ್‌ಡಿಎಂಎಲ್‌ಗೆ ಪ್ರೀಮಿಯಂ ಕಳುಹಿಸಿದ ನಂತರ ಯಾವುದೇ ತಾಂತ್ರಿಕ ದೋಷದಿಂದಾಗಿ ಯಾವುದೇ ವಿಳಂಬಕ್ಕೆ, ಬ್ಯಾಂಕರ್‌ಗಳು ಜವಾಬ್ದಾರರಾಗಿರುವುದಿಲ್ಲ ಮತ್ತು ವಿಮಾ ಸಂಸ್ಥೆಗಳು ಅಂತಹ ಪಾವತಿಗಳನ್ನು ಸ್ವೀಕರಿಸಬೇಕಾಗಿರುತ್ತದೆ. ಆದರೆ, ಬ್ಯಾಂಕ್, CSC, ಗ್ರಾಮ ಒನ್ ಗಳು ಅರ್ಜಿಗಳು ಹಾಗೂ ಪ್ರೀಮಿಯಂ ಮೊತ್ತವು ಸಂಬಂಧಪಟ್ಟ ವಿಮಾ ಸಂಸ್ಥೆಗೆ ತಲುಪಿರುವ ಬಗ್ಗೆ, ಹಾಗೂ ವಿಮಾ ಸಂಸ್ಥೆಯಿಂದ ಸ್ವೀಕರಿಸಿರುವ ಬಗ್ಗೆ, ಖಾತರಿಪಡಿಸಿಕೊಳ್ಳುವುದು. ಮುಂದುವರೆದು, ಬ್ಯಾಂಕ್, CSC, ಗ್ರಾಮ ಒನ್ ಗಳಿಂದ ಆಗುವ ಯಾವುದೇ ವಿಳಂಬ ಪಾವತಿಗಾಗಿ PMFBY ಮತ್ತು RWBCIS ನ ಮಾರ್ಗಸೂಚಿಗಳ ಪ್ರಕಾರ ವಿಮಾ ಸಂಸ್ಥೆಗಳು ಬಡ್ಡಿ ವಿಧಿಸಬಹುದು. ಪೇ-ಗೋವ್ ಶುಲ್ಕಗಳನ್ನು ಬೆಳೆ ವಿಮಾ ಸಂಸ್ಥೆಗಳು ಭರಿಸತಕ್ಕದ್ದು.

12. ಸಾಮಾನ್ಯ ಸೇವಾ ಕೇಂದ್ರ (Common Service Centre-CSC) ಗಳಲ್ಲಿ ಮತ್ತು ಗ್ರಾಮ ಒನ್ ಗಳಲ್ಲಿ ನೋಂದಾಯಿಸಿದ ಬೆಳೆ ಸಾಲ ಪಡೆಯದ ರೈತರ ವಿವರಗಳನ್ನು ಸಂರಕ್ಷಣೆ

ತಂತ್ರಾಂಶದಲ್ಲಿ ದಾಖಲಿಸಿ ಪ್ರಸ್ತಾವನೆಗಳನ್ನು ಮತ್ತು ವಿಮಾ ಕಂತಿನ ಮೊತ್ತವನ್ನು ವಿಮಾ ಸಂಸ್ಥೆಗಳಿಗೆ ವರ್ಗಾಯಿಸಲು ಪರಿಷ್ಕರಿಸಿದ ಮಾರ್ಗಸೂಚಿಯ ಅನ್ವಯ ಸಮಯಾವಕಾಶವಿರುತ್ತದೆ.

13. PMFBY ಪರಿಷ್ಕೃತ ಮಾರ್ಗಸೂಚಿಗಳನ್ವಯ, ಪ್ರಸಕ್ತ ಹಂಗಾಮು ಅಥವಾ ನಂತರದ ಹಂಗಾಮುಗಳಲ್ಲಿ (ಬಹು-ವರ್ಷದ ಒಪ್ಪಂದವಿದ್ದಲ್ಲಿ), ಅಗತ್ಯವಿದ್ದಲ್ಲಿ, ರಾಜ್ಯಗಳು ಹೆಚ್ಚುವರಿ ವಿಮಾಘಟಕಗಳನ್ನು ಅಧಿಸೂಚಿಸಬಹುದು ಅಥವಾ ಕೆಲವು ವಿಮಾಘಟಕಗಳನ್ನು ಅಧಿಸೂಚನೆಯಿಂದ ಕೈಬಿಡಬಹುದು (Denotify). ಜಿಲ್ಲೆಯೊಳಗಿನ ಈಗಾಗಲೇ ಅಧಿಸೂಚಿತ ಬೆಳೆಗಳಿಗೆ ಅಧಿಸೂಚಿಸಲಾದ ವಿಮಾಘಟಕಗಳ ಸಂಖ್ಯೆಗಳಿಗೆ ಗರಿಷ್ಠ ಶೇಕಡಾ 10 ಮೀರದಂತೆ ಹೆಚ್ಚು ಅಥವಾ ಕಡಿಮೆ (deviate) ಮಾಡಬಹುದು ಮತ್ತು ಆಯಾ ಜಿಲ್ಲೆ-ಬೆಳೆ ಸಂಯೋಜನೆಗಳಿಗೆ ಅನುಮೋದಿತವಾಗಿರುವ ಪ್ರೀಮಿಯಂ ದರವನ್ನು ಪರಿಗಣಿಸಿ, ನೋಂದಣಿ ಅಂತಿಮ ದಿನಾಂಕದೊಳಗೆ ಅಧಿಸೂಚಿಸಬೇಕು. ಶೇಕಡ 10 ಕ್ಕಿಂತ ಹೆಚ್ಚು ವ್ಯತ್ಯಾಸವಿದ್ದಲ್ಲಿ (deviation >10%) ಅಥವಾ ಹೊಸ ಬೆಳೆ ಸೇರ್ಪಡೆ ಮಾಡಬೇಕಾದಲ್ಲಿ, weighted Average premium ದರವನ್ನು ಸಮೀಪದ ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿರುವಂತೆ ಲೆಕ್ಕಹಾಕುವ ಮೂಲಕ ಅಥವಾ ಅಸ್ತಿತ್ವದಲ್ಲಿರುವ ಪ್ರೀಮಿಯಂ ದರದಲ್ಲಿ ಸೂಕ್ತವಾದ ಹೆಚ್ಚಳವನ್ನು ವಿಧಿಸುವ ಮೂಲಕ ವಾಸ್ತವಿಕ ಪ್ರೀಮಿಯಂ ದರವನ್ನು ಕಾರ್ಯಗತಗೊಳಿಸಬಹುದು. ಅಂತಹ ಬೆಳೆಗಳ ದರಗಳನ್ನು Technical Support Unit (TSU) ನಿರ್ಧರಿಸುತ್ತದೆ/ಪರಿಶೀಲಿಸುತ್ತದೆ ಮತ್ತು ಅದರ ನಿರ್ಧಾರಕ್ಕೆ ರಾಜ್ಯಗಳು ಮತ್ತು ಕಂಪನಿಗಳು ಬದ್ಧವಾಗಿರಬೇಕು.

14. ಆರ್ಥಿಕ ಇಲಾಖೆಯು ಮೇಲೆ ಓದಲಾದ (14)ರ ಟಿಪ್ಪಣಿಯಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು 2025-26 ನೇ ಸಾಲಿಗೆ ಪ್ರಸ್ತುತ ಮಾದರಿಯಲ್ಲೇ (without cup and cap model -Complete Risk transfer to the Insurane Company) ಮುಂದುವರೆಸಿ ಅನುಷ್ಠಾನಗೊಳಿಸಲು ಸಹಮತಿಸಿದೆ.

15. ಕೇಂದ್ರ ಸರ್ಕಾರದ ನಿಯಮದಂತೆ ಪ್ರಸ್ತುತ ಟೆಂಡರ್ ಮೂರು ವರ್ಷಗಳ ಅವಧಿಗೆ ಆಹ್ವಾನಿಸಲಾಗಿದ್ದು 2023-24 ರಿಂದ 2025-26 ವರೆಗೆ ಇರುತ್ತದೆ. ಆರ್ಥಿಕ ಇಲಾಖೆ ಸಹಮತಿಯಂತೆ ಪ್ರತಿ ವರ್ಷ ಕಾರ್ಯಾದೇಶ ನೀಡಲಾಗುತ್ತಿದ್ದು 2024-25 ವರೆಗೆ ಕಾರ್ಯಾದೇಶ ನೀಡಲಾಗಿದೆ. RWBCIS ಯೋಜನೆಯನ್ನು ಅನುಷ್ಠಾನಗೊಳಿಸಲು M/s. KSHEMA General Insurance Companyಯು ಉತ್ತರ ಕನ್ನಡ ಜಿಲ್ಲೆ ಒಳಗೊಂಡಂತೆ ಒಟ್ಟು 11 ಜಿಲ್ಲೆಗಳಿಗೆ ವಿಮಾ ಯೋಜನೆ ಅನುಷ್ಠಾನಗೊಳಿಸುವ ಕಂಪನಿಯಾಗಿರುತ್ತದೆ. M/s. KSHEMA General Insurance Company ಗೆ ಸಂಬಂಧಿಸಿದಂತೆ ಅಸಮರ್ಪಕ ಅನುಷ್ಠಾನದ ಕುರಿತು ಕಾರಣ ಕೇಳಿ ನೋಟಿಸ್ ನೀಡಲಾಗಿರುತ್ತದೆ. ಈ ಬಗ್ಗೆ ಸಂಸ್ಥೆಯಿಂದ ಸೂಕ್ತ ಕಾರಣ ಪಡೆದ ನಂತರ ಮತ್ತು ಉನ್ನತ ಮಟ್ಟದಲ್ಲಿ ತೀರ್ಮಾನವಾದ ನಂತರ ಸದರಿ ಜಿಲ್ಲೆಗಳಿಗೆ ಪ್ರತ್ಯೇಕ ಆದೇಶ ಹೊರಡಿಸಬಹುದಾಗಿರುತ್ತದೆ ಎಂದು ತಿಳಿಸಿ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಮೇಲೆ ಓದಲಾದ (15) ರ ಪತ್ರದಲ್ಲಿ ಹಿಂದಿನ ವರ್ಷಗಳಲ್ಲಿ ವಿಧಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಸೂಕ್ತವಾಗಿ ಒಳಗೊಂಡಂತೆ 2025-26ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, 2025-26ನೇ ಸಾಲಿಗೆ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: HORTI/676/HGM/2022,**
**ಬೆಂಗಳೂರು, ದಿನಾಂಕ: 23.06.2025**

1. ಕರ್ನಾಟಕ ರಾಜ್ಯದಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿಯಲ್ಲಿ ವಿವಿಧ ತೋಟಗಾರಿಕೆ ಬೆಳೆಗಳನ್ನು 2025-26ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಗ್ರಾಮ ಪಂಚಾಯತಿ/ ನಗರ ಸ್ಥಳೀಯ ಸಂಸ್ಥೆಗಳ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಅಧಿಸೂಚಿಸಲಾಗಿದೆ.

2. ಮುಂಗಾರು ಹಂಗಾಮಿನ 12,741 ಮತ್ತು ಹಿಂಗಾರು ಹಂಗಾಮಿನ 860 ಒಟ್ಟು 13,601 ವಿಮಾಘಟಕ-ಬೆಳೆಗಳ ಸಂಯೋಜನೆಗಳ ಪೈಕಿ M/s Kshema GIC ಅನುಷ್ಠಾನಗೊಳಿಸಬೇಕಾಗಿದ್ದ 11 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳ ಮುಂಗಾರು ಹಂಗಾಮಿಗೆ 8976 ಮತ್ತು ಹಿಂಗಾರು ಹಂಗಾಮಿಗೆ 478 ಒಟ್ಟು 9454 ವಿಮಾಘಟಕ-ಬೆಳೆಗಳ ಸಂಯೋಜನೆಗಳನ್ನು ಕ್ರಮವಾಗಿ ಅನುಬಂಧ-1 ಮತ್ತು ಅನುಬಂಧ -2 ರಲ್ಲಿ ಇರುವಂತೆ ಅಧಿಸೂಚಿಸಲಾಗಿದೆ.

3. ತೋಟಗಾರಿಕೆ ಬೆಳೆಗಳಿಗೆ 2025-26ನೇ ಸಾಲಿನಲ್ಲಿ ನೋಂದಾಯಿಸಲು ಅಂತಿಮ ದಿನಾಂಕವು ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ಒಂದೇ ಆಗಿರುತ್ತದೆ. ಜಿಲ್ಲಾವಾರು/ ಹಂಗಾಮುವಾರು ಅಧಿಸೂಚಿತ ಬೆಳೆಗಳ ನೋಂದಣಿ ಅಂತಿಮ ದಿನಾಂಕ ಬೇರೆ ಬೇರೆ ಇದ್ದು, ವಿವರವನ್ನು ಅನುಬಂಧ-3 ರಲ್ಲಿ ಇರುವಂತೆ ಅಧಿಸೂಚಿಸಲಾಗಿದೆ.

4. ಜಿಲ್ಲಾವಾರು, ತಾಲ್ಲೂಕುವಾರು, ಬೆಳೆವಾರು ಅಧಿಸೂಚಿಸಲ್ಪಟ್ಟ ವಿಮಾ ಘಟಕಗಳ (ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳು) ವಿವರಗಳನ್ನು ಅನುಬಂಧ – 1 & 2 ರಲ್ಲಿ ನೀಡಲಾಗಿದ್ದು, ಕೇಂದ್ರ ಸರ್ಕಾರದ ಬೆಳೆ ವಿಮೆ ಯೋಜನೆಯ ಮಾರ್ಗಸೂಚಿಗಳನ್ವಯ ಆಯಾ ಜಿಲ್ಲೆಗಳಲ್ಲಿ ಒಟ್ಟು ವಿಮಾಘಟಕ-ಬೆಳೆ ಸಂಯೋಜನೆಗಳ ಶೇಕಡಾ 10 ರಷ್ಟು ವಿಮಾಘಟಕ-ಬೆಳೆ ಸಂಯೋಜನೆಗಳನ್ನು ಹೆಚ್ಚು ಅಥವಾ ಕಡಿಮೆ ಮಾಡಲು ಅವಕಾಶವಿದ್ದು, 2024-25ನೇ ಸಾಲಿಗೆ ಹೋಲಿಸಿದಲ್ಲಿ 2024-25ನೇ ಸಾಲಿಗೆ ಹೆಚ್ಚುವರಿಯಾಗಿ ಒಟ್ಟು 48 ವಿಮಾಘಟಕ-ಬೆಳೆ ಸಂಯೋಜನೆಗಳನ್ನು [ಮುಂಗಾರು], (Addition of GP/IU) ವಿವರಗಳನ್ನು ಅನುಬಂಧ-4 ರಲ್ಲಿ ಇರುವಂತೆ ಅಧಿಸೂಚಿಸಲಾಗಿದೆ.

5. ರಾಜ್ಯದಲ್ಲಿ ಹೊಸದಾಗಿ ತಾಲ್ಲೂಕುಗಳಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (RDPR) ಇಲಾಖೆಯು ಗ್ರಾಮ ಪಂಚಾಯತ್ ಗಳನ್ನು ಹೊಸ ತಾಲ್ಲೂಕುಗಳು ಸೇರಿದಂತೆ ವಿವಿಧ ತಾಲ್ಲೂಕುಗಳಿಗೆ ವಿಂಗಡಿಸಿರುತ್ತಾರೆ. ಹೊಸದಾಗಿ ರಚಿಸಲಾದ ತಾಲ್ಲೂಕುವಾರು, ವಿಮಾ ಘಟಕವಾರು ತೋಟಗಾರಿಕೆ ಬೆಳೆಗಳ ವಿವರಗಳನ್ನು ಅನುಬಂಧ-5 ರಲ್ಲಿ ಇರುವಂತೆ ಅಧಿಸೂಚಿಸಿ ಆದೇಶಿಸಿದೆ.

6. ಅಧಿಸೂಚಿಸಲಾದ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ 2025-26ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ

ಬೆಳೆ ವಿಮೆ ಯೋಜನೆಯಡಿ (R-WBCIS) ಬೆಳೆ ಸಾಲ ಪಡೆಯುವ (Loanee) ಮತ್ತು ಬೆಳೆ ಸಾಲ ಪಡೆಯದ (Non Loanee) ರೈತರಿಗೆ ವಿಮಾ ಮೊತ್ತವು ಜಿಲ್ಲೆಗಳ ಬೆಳೆವಾರು ಸರಾಸರಿ ಹಣಕಾಸು ಪ್ರಮಾಣಕ್ಕೆ (Crop-wise average of Scale of Finance) ಸಮನಾಗಿದ್ದು, SLCCCI ಸಭೆಯಲ್ಲಿ ಅನುಮೋದಿತವಾಗಿದ್ದು, ರೈತರ ಪಾಲಿನ ವಿಮಾ ಕಂತಿನ ಮೊತ್ತವು ಬೆಳೆ ವಿಮಾ ಮೊತ್ತದ ಶೇ. 5 ರಷ್ಟು ಆಗಿರುತ್ತದೆ. ಟೆಂಡರ್ ಮೂಲಕ ಅಂತಿಮಗೊಳಿಸಿದ ಬೆಳೆ ವಿಮಾ ಕಂತಿನ ಒಟ್ಟು ಮೊತ್ತವು ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿಗದಿಪಡಿಸಿದ ಗರಿಷ್ಠ ಮಿತಿ ಮೀರಿದಲ್ಲಿ ರೈತರು ಶೇ.5 ಕ್ಕಿಂತ ಹೆಚ್ಚು ವಿಮಾ ಕಂತಿನ ಮೊತ್ತವನ್ನು ಪಾವತಿಸಬೇಕಾಗಿದ್ದು, ವಿಮಾ ಮೊತ್ತದ ಹಾಗು ವಿಮಾ ಕಂತಿನ ವಿವರಗಳನ್ನು ಅನುಬಂಧ-6ರಲ್ಲಿ ನೀಡಲಾಗಿದೆ. ರೈತರು ಅದನ್ನು ಪಾವತಿಸಿ ನಿಯಾಮಾನುಸಾರ ನೋಂದಣಿ ಮಾಡಿಕೊಳ್ಳಬಹುದು.

7. 2025-26ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮುಗಳ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಅನುಷ್ಠಾನಕ್ಕೆ ಯೋಜನೆವಾರು, ಬೆಳೆವಾರು ರೈತರ ವಿವರಗಳನ್ನು ಆನ್ ಲೈನ್ ಪೋರ್ಟಲ್ (www.samrakshane.karnataka.gov.in) ಮೂಲಕ ಮಾತ್ರ ನೋಂದಾಯಿಸಲು ಆದೇಶಿಸಿದೆ.

8. ಸಂರಕ್ಷಣೆ ತಂತ್ರಾಂಶವು FRUITS ತಂತ್ರಾಂಶದೊಂದಿಗೆ ಸಂಯೋಜಿಸಲಾಗಿದ್ದು, ಬೆಳೆ ವಿಮೆ ನೋಂದಣಿಗಾಗಿ FRUITS ತಂತ್ರಾಂಶದಲ್ಲಿ ರೈತರ ನೋಂದಣಿ ಕಡ್ಡಾಯವಾಗಿರುತ್ತದೆ.

9. ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ನೋಂದಣಿಗೆ ಬಹುವಾರ್ಷಿಕ ಬೆಳೆಗಳು ನಂತರದ ಋತುಗಳಲ್ಲಿ / ವರ್ಷಗಳಲ್ಲಿ ಸಾಮಾನ್ಯವಾಗಿ ಬದಲಾಗುವುದಿಲ್ಲವಾದ್ದರಿಂದ, ನೋಂದಣಿ ಸಮಯದಲ್ಲಿಯೇ ಹಿಂದಿನ ವರ್ಷಗಳು/ ಋತುಗಳ ಬೆಳೆ ಸಮೀಕ್ಷೆಯ ಪ್ರಕಾರ ಬೆಳೆ ಕಂಡುಬಂದರೆ ಮಾತ್ರ ದೀರ್ಘಕಾಲಿಕ ಬೆಳೆಗಳಿಗೆ (ಪರಂಗಿ/ಪಪ್ಪಾಯ ಹೊರತುಪಡಿಸಿ) ನೋಂದಣಿಗೆ ಅವಕಾಶ ಕಲ್ಪಿಸುವುದು ಮತ್ತು ಹಿಂದಿನ ವರ್ಷಗಳು/ ಋತುಗಳ ಬೆಳೆ ಸಮೀಕ್ಷೆಯ ಮಾಹಿತಿಯ ಪ್ರಕಾರ ದೀರ್ಘಕಾಲಿಕ ಬೆಳೆ ಕಂಡುಬರದಿದ್ದರೆ (ಪಪ್ಪಾಯ ಹೊರತುಪಡಿಸಿ), ನೋಂದಣಿಗೆ ಅನುಮತಿ ಇರುವುದಿಲ್ಲ. ಋತುಮಾನಿಕ ಬೆಳೆಗಳು ಹಾಗೂ ಪಪ್ಪಾಯ/ಪರಂಗಿ ನೋಂದಾಯಿತ ರೈತರು ಬೆಳೆದಿರುವ ಬಗ್ಗೆ ಆಯಾ ವರ್ಷ ಹಾಗೂ ಋತುವಿನ ಬೆಳೆ ಸಮೀಕ್ಷೆ ದತ್ತಾಂಶದೊಂದಿಗೆ ಹೋಲಿಸಿ ವಿಮಾ ಪರಿಹಾರಕ್ಕೆ ಪರಿಗಣಿಸುವುದು.

10. Area Correction Factor (ACF) ಅಳವಡಿಕೆ ಕುರಿತು, ರಾಜ್ಯದಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳುತ್ತಲಿದ್ದು, ಬೆಳೆ ಸಮೀಕ್ಷೆಯ ಸಮಯದಲ್ಲಿ ಕಂಡುಬರುವ ಬೆಳೆಗಳೊಂದಿಗೆ ವಿಮೆ ಮಾಡಿದ ಬೆಳೆಯನ್ನು ಹೋಲಿಸುವ ಮೂಲಕ ಪ್ರತಿ ಪ್ರಸ್ತಾವನೆಯನ್ನು ಸಿಂಧುವೆಂದು ಕಂಡಬಂದ ಪ್ರಸ್ತಾವನೆಗಳಿಗೆ ಅರ್ಹ ವಿಮಾ ಪರಿಹಾರ ಪಾವತಿಸಲಾಗುತ್ತಿದೆ. ಬೆಳೆ ಸಮೀಕ್ಷೆಯ ವಿವರಗಳನ್ನು ಬಳಸುವಲ್ಲೆಲ್ಲಾ ಪ್ರದೇಶ ತಿದ್ದುಪಡಿ ಅಂಶವನ್ನು (ACF) ಅನ್ವಯಿಸಲಾಗುವುದಿಲ್ಲ. ಬೆಳೆ ಸಮೀಕ್ಷೆಯನ್ನು ಕೈಗೊಳ್ಳದಿದ್ದಲ್ಲಿ ಪರಿಷ್ಕರಿಸಿದ PMFBY ಮಾರ್ಗಸೂಚಿಗಳ ಪ್ರಕಾರ ACF ಅನ್ನು ಅನ್ವಯಿಸಲಾಗುತ್ತದೆ.

11. ಈ ಯೋಜನೆಯಡಿ 2025-26ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪ (Localized Calamities) ಗಳಾದ ಆಲಿಕಲ್ಲು ಮಳೆ (Hailstorm) ಮತ್ತು ಮೇಘ ಸ್ಫೋಟ (Cloud Burst) ಸಂದರ್ಭದಲ್ಲಿ ಟರ್ಮ್ ಶೀಟ್ ನಲ್ಲಿ ನಮೂದಿಸಿರುವ –ರಿಸ್ಕ್ ಅವಧಿ ಒಳಗೆ ಬೆಳೆ

ನಷ್ಟವುಂಟಾದರೆ ವೈಯಕ್ತಿಕ ನಷ್ಟದ ನಿರ್ಧರಣೆಗಾಗಿ ನಷ್ಟ ಉಂಟಾಗುವಂತಹ ಜಿಲ್ಲೆಗಳಲ್ಲಿ ಬೆಳೆಗಳನ್ನು ಮತ್ತು ಸಂಭವನೀಯ ಅವಧಿಯನ್ನು ಈ ಮುಂದಿನಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

| ಬೆಳೆ | ಸ್ಥಳೀಯ ಅಪಾಯದ ಅವಧಿ |
|---|---|
| ಮಾವು, ದ್ರಾಕ್ಷಿ, ದಾಳಿಂಬೆ, ಪರಂಗಿ/ಪಪಾಯ, ನಿಂಬೆ, ಅಡಿಕೆ, ಕರಿಮೆಣಸು, ವೀಳ್ಯದೆಲೆ, ಹಸಿ ಮೆಣಸಿನಕಾಯಿ, ಹೂಕೋಸು, ಶುಂಠಿ | ಮೇಘ ಸ್ಫೋಟ (cloud burst)- ಜುಲೈ 1 ರಿಂದ 31 ಅಕ್ಟೋಬರ್ 2025.<br>ಆಲಿಕಲ್ಲು ಮಳೆ (Hailstorm)- ಜನವರಿ 1 ರಿಂದ ಜೂನ್ 30, 2026 ರವರೆಗೆ.<br>ಟರ್ಮ್ ಶೀಟ್ ರಿಸ್ಕ್ ಅವಧಿ, ವಿಮಾ ಮೊತ್ತ ಮತ್ತು ಪ್ರೀಮಿಯಂ ಮೊತ್ತಕ್ಕೆ ಸೀಮಿತವಾಗಿದೆ (ಹೆಚ್ಚುವರಿ ಪ್ರೀಮಿಯಂ ಇರುವುದಿಲ್ಲ). |

ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ (Individual losses), ಬೆಳೆ ವಿಮೆ ಮಾಡಿಸಿರುವ ರೈತರು ಈ ಬಗ್ಗೆ ಸಂಬಂಧಪಟ್ಟ ಹಣಕಾಸು ಸಂಸ್ಥೆ ಅಥವಾ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಛೇರಿಗಳಿಗೆ ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 72 ಗಂಟೆಗಳೊಳಗಾಗಿ ತಿಳಿಸಬೇಕು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ ನಿಯೋಜಿಸಬೇಕು. ಜಿಲ್ಲಾ ತೋಟಗಾರಿಕಾ ಇಲಾಖೆ ಹಾಗೂ ಕಂದಾಯ ಇಲಾಖೆಗಳು ಬೆಳೆ ನಷ್ಟದ ಪ್ರಮಾಣವನ್ನು ನಿರ್ಧರಿಸುವಲ್ಲಿ ವಿಮಾ ಸಂಸ್ಥೆಯವರಿಗೆ ನೆರವು ನೀಡತಕ್ಕದ್ದು. ಮುಂದುವರೆದು, ಸ್ಥಳೀಯ ಗಂಡಾಂತರಗಳ ಕಾರಣದಿಂದ ಸಂಭವಿಸಿದ ಬೆಳೆ ನಷ್ಟವು ವಿಮಾ ಘಟಕದಲ್ಲಿನ ಆಯಾ ಬೆಳೆಯ ವಿಮೆ ಕ್ಷೇತ್ರದ ಶೇ.25ಕ್ಕಿಂತ ಹೆಚ್ಚಾದಲ್ಲಿ ಅದನ್ನು ವಿಸ್ತಾರವಾದ ಮಾರ್ಗಸೂಚಿ ಪ್ರಕಾರ ಗಂಡಾಂತರವೆಂದು ಪರಿಗಣಿಸುವುದು ಹಾಗು ಬೆಳೆ ನಷ್ಟವನ್ನು ಮಾದರಿ ತಾಕುಗಳ ಆಧಾರದ ಮೇರೆಗೆ ಮಾಡುವುದು (If the area affected due to localised calamity is more than 25% of insured area in the IU for the damaged crop then it shall be considered as wide spread calamity and loss estimation shall be done on sample basis and claim paid to all eligible farmrs). ಬೆಳೆ ನಷ್ಟವನ್ನು ಅಂದಾಜಿಸಿ ಅರ್ಹ ಮೊತ್ತವನ್ನು ಸಕಾಲದಲ್ಲಿ ನೀಡುವುದು.

12. ವಿಮಾ ಪರಿಹಾರದ ಮೊತ್ತವನ್ನು ನೀಡಲು ಅಧಿಸೂಚಿಸಲಾದ Term sheet (Pay out structure, Duration, Index ಇತ್ಯಾದಿ ಗಳನ್ನು) ಆಧರಿಸಿ ಮಾತ್ರ ಪರಿಗಣಿಸುವುದು.
13. ಮುಂಗಾರು ಮತ್ತು ಹಿಂಗಾರು ಹಂಗಾಮು 2025-26ರ ಅವಧಿಗೆ ವಿವಿಧ ತೋಟಗಾರಿಕೆ ಬೆಳೆಗಳಿಗೆ ಅಂತಿಮಗೊಳಿಸಲಾದ ರಿಸ್ಕ್ ಅವಧಿಯ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕಗಳು ಆಯಾ ಟರ್ಮ್ ಶೀಟ್ ನಂತಿರುತ್ತದೆ.
14. ಯೋಜನೆಯಡಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ ಹಾಗೂ ಪಡೆಯದ ರೈತರು ಭಾಗವಹಿಸಬಹುದು. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಸಂಬಂಧಿತ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು.

15. ಬ್ಯಾಂಕುಗಳು ವಿಮೆ ಮಾಡಿಸಿದ ರೈತರ ಪ್ರೀಮಿಯಂ ಮೊತ್ತ ಹಾಗೂ ರೈತರ ವಿವರಗಳನ್ನು ನಿಗದಿತ ನಮೂನೆ ಯಲ್ಲಿ ಹಾಗೂ ನಿಗದಿತ ಸಮಯದ ಒಳಗೆ ಸಂರಕ್ಷಣೆ ತಂತ್ರಾಂಶದ (Online portal) ಮೂಲಕ ದಾಖಲಿಸಿ ವಿಮಾ ಸಂಸ್ಥೆಗೆ ಸಲ್ಲಿಸುವುದು. ಬ್ಯಾಂಕುಗಳು ಸಂರಕ್ಷಣೆ ಪೋರ್ಟಲ್ ಮೂಲಕ ರೈತರ ವಿವರಗಳನ್ನು ವಿಮಾ ಸಂಸ್ಥೆಗೆ ನೀಡುವವರೆಗೂ ಅಂತಹ ರೈತರ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡತಕ್ಕದ್ದಲ್ಲ.

16. ಬ್ಯಾಂಕುಗಳು ಮತ್ತು ಸಾಮಾನ್ಯ ಸೇವಾ ಕೇಂದ್ರ (Common Service Centre) ಗಳು ರೈತರ ದಾಖಲಾತಿಗಾಗಿ ಸಂರಕ್ಷಣೆ ಪೋರ್ಟಲ್ ಅನ್ನು ಬಳಸುತ್ತವೆ ಮತ್ತು ನಂತರ ಹಣವನ್ನು ವಿಮಾ ಸಂಸ್ಥೆಯ ಖಾತೆಗೆ ವರ್ಗಾಯಿಸುತ್ತವೆ. ಸಂರಕ್ಷಣೆ ಪೋರ್ಟಲ್ ಅನ್ನು ಕೇಂದ್ರ ಸರ್ಕಾರದ ಪ್ರಾಯೋಜಿತ ಪೇಮೆಂಟ್ ಗೇಟ್‌ವೇ(Payment gateway) "ಪೇ-ಗೋವ್" (Pay-Gov) ನೊಂದಿಗೆ ಸಂಯೋಜಿಸಲಾಗಿದೆ. ಪೇಮೆಂಟ್ ಗೇಟ್‌ವೇ ಅನ್ನು ಎನ್.ಎಸ್.ಡಿ.ಎಲ್ ಡೇಟಾಬೇಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್ (ಎನ್‌ಡಿ.ಎಂ.ಎಲ್/NDML) ನಿರ್ವಹಿಸುತ್ತದೆ. ಈ ಸೇವೆಯನ್ನು ಬಳಸಿಕೊಂಡು ಮಾಡಿದ ವಹಿವಾಟಿಗೆ ಎನ್.ಡಿ.ಎಂ.ಎಲ್ ಶುಲ್ಕವನ್ನು ನಿಗದಿಪಡಿಸಿದೆ. ಆದ್ದರಿಂದ, ಅನ್ವಯವಾಗುವ ತೆರಿಗೆಯೊಂದಿಗೆ ಪ್ರತಿ ವಹಿವಾಟಿನ ಪೇಮೆಂಟ್ ಗೇಟ್‌ವೇ ಶುಲ್ಕವನ್ನು ವಿಮಾ ಸಂಸ್ಥೆಗಳು ಭರಿಸಬೇಕಾಗುತ್ತದೆ. ಪೇ-ಗೋವ್ ಮೂಲಕ ಬ್ಯಾಂಕರ್‌ಗಳು ಎನ್.ಡಿ.ಎಂ.ಎಲ್ ಗೆ ಪಾವತಿ ಮಾಡಿದ ನಂತರ, ಈ ಮೊತ್ತವನ್ನು ಆಯಾ ಕಂಪನಿಗಳಿಗೆ ವರ್ಗಾಯಿಸಲು ಎನ್.ಡಿ.ಎಂ.ಎಲ್ ಕೆಲವು ಸಮಯ ತೆಗೆದುಕೊಳ್ಳುತ್ತದೆ, ಪೇ-ಗೋವ್ ಸಾಮಾನ್ಯವಾಗಿ ವ್ಯವಹಾರದ ದಿನಾಂಕದ 2 ದಿನಗಳಲ್ಲಿ (ಟಿ + 2 ದಿನಗಳು) ಮೊತ್ತವನ್ನು ಸಂಬಂಧಪಟ್ಟ ವಿಮಾ ಸಂಸ್ಥೆಗೆ ವರ್ಗಾಯಿಸುತ್ತದೆ. ವಿಮಾ ಸಂಸ್ಥೆಗಳಿಗೆ ಪ್ರೀಮಿಯಂ ಸಲ್ಲಿಸುವ ಕೊನೆಯ ದಿನಾಂಕವು ನಿಗದಿಯಾಗಿದ್ದರಿಂದ, ಬ್ಯಾಂಕರ್‌ನಿಂದ ಎನ್.ಡಿ.ಎಂ.ಎಲ್ ಗೆ ಪೇ-ಗೋವ್ ಮೂಲಕ ಪ್ರೀಮಿಯಂ ಪಾವತಿಯನ್ನು ವಿಮಾ ಸಂಸ್ಥೆಗಳಿಗೆ ಪಾವತಿಯಾಗಿ ಪರಿಗಣಿಸಬೇಕಾಗಿದೆ. ಪೇ-ಗೋವ್ ಮರುಹೊಂದಾಣಿಕೆ ವರದಿಯು ಸಂರಕ್ಷಣೆಯಲ್ಲಿ ವಿಮಾ ಸಂಸ್ಥೆ ಮತ್ತು ಬ್ಯಾಂಕರ್‌ಗಳಿಗೆ ಲಭ್ಯವಿದ್ದು, ನಿಗದಿತ ಸಮಯದ ಮಿತಿಯೊಳಗೆ ಅಥವಾ ವಿಸ್ತೃತ ಎಲ್ಲಾ ಪಾಲುದಾರರು ಒಪ್ಪಿಕೊಳ್ಳುವಂತೆ ಸಮಯ ಮಿತಿಯೊಳಗೆ ಸಂರಕ್ಷಣೆ ಮೂಲಕ ರವಾನಿಸಲಾದ ಪ್ರಸ್ತಾವನೆಗಳ ಉಳಿಕೆ ಮೊತ್ತ ಇದ್ದಲ್ಲಿ ಪ್ರೀಮಿಯಂನ (ಮುಖ್ಯವಾಗಿ ತಾಂತ್ರಿಕ ತೊಂದರೆಗಳಿಂದಾಗಿ), ಬೆಳೆವಿಮಾ ಸಂಸ್ಥೆಗಳು ಪೇ-ಗೋವ್ ಮತ್ತು ಆಯಾ ಬ್ಯಾಂಕ್ ಶಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪ್ರಸ್ತಾವನೆ ಸ್ವೀಕರಿಸಿದ 15 ದಿನಗಳೊಳಗಾಗಿ ಅಥವಾ ಪ್ರಸ್ತಾವನೆ ಸ್ವೀಕರಿಸಲು ನಿಗದಿಪಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಉಳಿಕೆ ಮೊತ್ತವನ್ನು ಸ್ವೀಕರಿಸಬೇಕು. ಆಯಾ ಕಂಪನಿಗಳಿಗೆ ಮೊತ್ತವನ್ನು ವರ್ಗಾವಣೆ ಮಾಡುವಲ್ಲಿ ಎನ್‌ಡಿಎಂಎಲ್ (ಪೇ-ಗೋವ್) ಮಾಡುವ ಯಾವುದೇ ವಿಳಂಬ ಅಥವಾ ಬ್ಯಾಂಕರ್ ಎನ್‌ಡಿಎಂಎಲ್‌ಗೆ ಪ್ರೀಮಿಯಂ ಕಳುಹಿಸಿದ ನಂತರ ಯಾವುದೇ ತಾಂತ್ರಿಕ ದೋಷದಿಂದಾಗಿ ಯಾವುದೇ ವಿಳಂಬಕ್ಕೆ, ಬ್ಯಾಂಕರ್‌ಗಳು ಜವಾಬ್ದಾರರಾಗಿರುವುದಿಲ್ಲ ಮತ್ತು ವಿಮಾ ಸಂಸ್ಥೆಗಳು ಅಂತಹ ಪಾವತಿಗಳನ್ನು ಸ್ವೀಕರಿಸಬೇಕಾಗಿರುತ್ತದೆ. ಆದರೆ, ಬ್ಯಾಂಕ್, CSC, ಗ್ರಾಮ ಒನ್ ಗಳು ಪ್ರಸ್ತಾವನೆ ಹಾಗೂ ಪ್ರೀಮಿಯಂ ಮೊತ್ತ ಸಂಬಂಧಪಟ್ಟ ವಿಮಾ ಸಂಸ್ಥೆಗೆ ಸ್ವೀಕೃತವಾಗಿರುದನ್ನು ಖಾತರಿಪಡಿಕೊಳ್ಳುವುದು. ಬ್ಯಾಂಕ್, CSC, ಗ್ರಾಮ ಒನ್ ಗಳಿಂದ ಆಗುವ ಯಾವುದೇ ವಿಳಂಬ ಪಾವತಿಗಾಗಿ PMFBY ಮತ್ತು RWBCIS ನ ಮಾರ್ಗಸೂಚಿಗಳ ಪ್ರಕಾರ ವಿಮಾ ಸಂಸ್ಥೆಗಳು ಬಡ್ಡಿ ವಿಧಿಸಬಹುದು. ಪೇ-ಗೋವ್ ಶುಲ್ಕಗಳನ್ನು ಬೆಳೆ ವಿಮಾ ಸಂಸ್ಥೆಗಳು ಭರಿಸಬೇಕಾಗಿರುತ್ತದೆ.

17. ಸಾಮಾನ್ಯ ಸೇವಾ ಕೇಂದ್ರ (Common Service Centre-CSC) ಗಳಲ್ಲಿ ಮತ್ತು ಗ್ರಾಮ ಒನ್ ಗಳಲ್ಲಿ ನೋಂದಾಯಿಸಿದ ಬೆಳೆ ಸಾಲ ಪಡೆಯದ ರೈತರ ವಿವರಗಳನ್ನು ಸಂರಕ್ಷಣೆ ತಂತ್ರಾಂಶದಲ್ಲಿ

ದಾಖಲಿಸಿ ಪ್ರಸ್ತಾವನೆಗಳನ್ನು ಮತ್ತು ವಿಮಾ ಕಂತಿನ ಮೊತ್ತವನ್ನು ವಿಮಾ ಸಂಸ್ಥೆಗಳಿಗೆ ಮಾರ್ಗಸೂಚಿ ಪ್ರಕಾರ ಸಕಾಲದಲ್ಲಿ ವರ್ಗಾಯಿಸುವುದು.

18. ರೈತರ ವಿಮಾ ಕಂತಿನ ಮೊತ್ತದಲ್ಲಿ ಶೇ. 4 ರಷ್ಟು ಸೇವಾ ಶುಲ್ಕವನ್ನು ಬ್ಯಾಂಕುಗಳಿಗೆ ವಿಮಾ ಸಂಸ್ಥೆಯು ನೀಡತಕ್ಕದ್ದು. ಅದೇ ರೀತಿ ಸಾಮಾನ್ಯ ಸೇವಾ ಕೇಂದ್ರ (Common Service Centre-CSC) ಗಳಲ್ಲಿ ಮತ್ತು ಗ್ರಾಮ ಒನ್ ಗಳಲ್ಲಿ ನೋಂದಾಯಿಸಿದ ಪ್ರಸ್ತಾವನೆಗಳ ಆಧಾರದ ಮೇರೆಗೆ ನಿಗದಿತ ಸೇವಾ ಶುಲ್ಕವನ್ನು ವಿಮಾ ಸಂಸ್ಥೆಗಳು ನೀಡತಕ್ಕದ್ದು.

19. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಸಂರಕ್ಷಣೆ ತಂತ್ರಾಂಶದ ಮೂಲಕ ನೇರವಾಗಿ ರೈತರ ಖಾತೆಗೆ ಜಮಾ ಮಾಡತಕ್ಕದ್ದು.

20. ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (RWBCIS) ಮತ್ತು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗಳಡಿ (PMFBY) ಅಧಿಸೂಚಿತ ವಿಮಾಘಟಕಗಳಲ್ಲಿ ಹವಾಮಾನ ಸೂಚ್ಯಂಕಗಳ ಆಧಾರದ ಮೇರೆಗೆ ವಿಮಾ ಪರಿಹಾರ ಲೆಕ್ಕಾಚಾರ ಮಾಡಲು ಸ್ವಯಂಚಾಲಿತ ಹವಾಮಾನ / ಮಳೆ ಮಾಪನ ಕೇಂದ್ರಗಳಿಂದ ಹಾಗೂ ಕಾರಣಾಂತರಗಳಿಂದ ಸದರಿ ಕೇಂದ್ರಗಳಲ್ಲಿ ಮಳೆ/ಹವಾಮಾನ ದತ್ತಾಂಶಗಳು ಲಭ್ಯವಾಗದಿದ್ದಲ್ಲಿ ಸಮೀಪದಲ್ಲಿ ಗುರುತಿಸಿ ಅಧಿಸೂಚಿಸಲಾದ ಪರ್ಯಾಯ ಸ್ವಯಂ ಚಾಲಿತ ಹವಾಮಾನ / ಮಳೆ ಮಾಪನ ಕೇಂದ್ರದ ಮಾಹಿತಿಯನ್ನು (ಬ್ಯಾಕ್ ಅಪ್ ಕೇಂದ್ರ 1&2) ಪರಿಗಣಿಸಬೇಕಾಗಿರುವ ಕೇಂದ್ರಗಳಿಗೆ ಸರ್ಕಾರದ ಆದೇಶ ಸಂಖ್ಯೆ:HORTI 231 HGM 2024, ದಿನಾಂಕ: 13.06.2024 ರಂತೆ 2023-24ನೇ ಸಾಲಿಗೆ ಅಧಿಸೂಚಿಸಲಾಗಿದೆ. 2024-25 ಮತ್ತು 2025-26ನೇ ಸಾಲಿಗೂ ಅಧಿಸೂಚಿಸಲಾದ ಪರ್ಯಾಯ ಸ್ವಯಂ ಚಾಲಿತ ಹವಾಮಾನ / ಮಳೆ ಮಾಪನ ಕೇಂದ್ರದ ಮಾಹಿತಿಯನ್ನು (ಬ್ಯಾಕ್ ಅಪ್ ಕೇಂದ್ರ 1&2) ಪರಿಗಣಿಸಬೇಕಾಗಿರುವ ಕೇಂದ್ರಗಳನ್ನು ಸರ್ಕಾರದ ಆದೇಶ ಸಂಖ್ಯೆ:HORTI 231 HGM 2024, ದಿನಾಂಕ: 21.06.2025 ರಲ್ಲಿ ಅಧಿಸೂಚಿಸಿ ಆದೇಶಿಸಲಾಗಿದೆ. ಅದರಂತೆ ನಿಯಮಾನುಸಾರ ಅವಶ್ಯಕತೆಗೆನುಗುಣವಾಗಿ ಕಾಲಕಾಲಕ್ಕೆ ಹೊರಡಿಸಲಾಗುವ ಅಧಿಸೂಚನೆಗಳಂತೆ ಪರಿಗಣಿಸುವುದು.

21. ವಿಮಾ ಪರಿಹಾರವನ್ನು ಅಂದಾಜಿಸಲು ಸರ್ಕಾರದಿಂದ ಅಧಿಸೂಚಿಸಲಾದ ಹಾಗೂ ನಿಯಮಾನುಸಾರ, ಅವಶ್ಯಕತೆಗೆನುಗುಣವಾಗಿ ಕಾಲಕಾಲಕ್ಕೆ ಹೊರಡಿಸಲಾಗುವ ಅಧಿಸೂಚನೆಗಳಂತೆ ಸಂಬಂಧಿತ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರ/ಪರ್ಯಾಯ ಕೇಂದ್ರಗಳಿಂದ ದಾಖಲಾದ ಮಾಹಿತಿಯನ್ನಾಧರಿಸಿ ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಯಾವುದೇ ಸಂದರ್ಭದಲ್ಲಿ ಅಧಿಸೂಚಿಸಲಾದ ಸಂಬಂಧಿತ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರಗಳಿಂದ ದಾಖಲಾದ ಮಾಹಿತಿಯನ್ನು ತಿದ್ದುವ/ ಬದಲಾಯಿಸುವ ಅವಕಾಶವಿರುವುದಿಲ್ಲ.

22. ವಿಮಾ ಸಂಸ್ಥೆಯು ಹವಾಮಾನ ದತ್ತಾಂಶದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ (If any anomalies are found in weather data), RWBCIS Revised Guidelines ನ Para no.19ರ "Dispute resolution regarding Weather Data/Crop loss" ಪ್ರಕಾರ ವಿಮಾ ಸಂಸ್ಥೆಯು ಹವಾಮಾನ ದತ್ತಾಂಶದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಹವಾಮಾನ ಮಾಹಿತಿ ಪಡೆದ ಏಳು (7) ದಿನಗಳೊಳಗಾಗಿ ರಾಜ್ಯ ಸರ್ಕಾರದ ಇಲಾಖೆಗೆ ಆಕ್ಷೇಪಣೆ ಸಲ್ಲಿಸಬೇಕು ಹಾಗೂ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು. (RWBCIS Revised Guidelines (Para 19.1) ಹಾಗೂ (Para 19.2 ರಂತೆ) 7 ದಿವಸಗಳೊಳಗಾಗಿ ಆಕ್ಷೇಪಣೆ ಸಲ್ಲಿಸದೇ ಇದ್ದಲ್ಲಿ, ಹವಾಮಾನ ಮಾಹಿತಿ ಸರಿಯಿದೆಯೆಂದು ವಿಮಾ ಸಂಸ್ಥೆಯು ಒಪ್ಪಿಕೊಂಡಿರುತ್ತದೆಂದು ಪರಿಗಣಿಸಲಾಗುತ್ತದೆ. ವಿಮಾ ಸಂಸ್ಥೆಯು ಏಳು (7) ದಿವಸಗಳೊಳಗಾಗಿ ಆಕ್ಷೇಪಣೆ

ಸಲ್ಲಿಸಿದ್ದಲ್ಲಿ ಮಾತ್ರ Arbitration committee, State Level Technical Committee ಹಾಗೂ ಕೇಂದ್ರಮಟ್ಟದ Technical Advisory Committee ಗೆ ಹಂತಹಂತವಾಗಿ ವ್ಯಾಜ್ಯ ಇತ್ಯರ್ಥ ಪಡಿಸಿಕೊಳ್ಳಬಹುದಾಗಿರುತ್ತದೆ.

23. ಕ್ಲಸ್ಟರ್ ವಾರು ಆಯ್ಕೆಯಾದ ವಿಮಾ ಸಂಸ್ಥೆಗಳು ವಿಮಾಪರಿಹಾರವನ್ನು ಯೋಜನೆ ಮಾರ್ಗಸೂಚಿಯನ್ವಯ ಸಕಾಲದಲ್ಲಿ ಪಾವತಿಸತಕ್ಕದ್ದು. ವಿಮಾ ಪರಿಹಾರವನ್ನು ಸಂರಕ್ಷಣೆ ತಂತ್ರಾಂಶದ ಮೂಲಕ ನಿಯಮಾನುಸಾರ ಲೆಕ್ಕ ಮಾಡಲಾಗುವುದು. ವಿಮಾ ಸಂಸ್ಥೆಗಳೂ ತಮ್ಮ ಹಂತದಲ್ಲಿ ವಿಮಾ ಪರಿಹಾರವನ್ನು ನಿಯಮಾನುಸಾರ ಲೆಕ್ಕ ಮಾಡಿ ಸಿದ್ಧವಿಡುವುದು. ಸಂರಕ್ಷಣೆ ತಂತ್ರಾಂಶದ ಮೂಲಕ ಲೆಕ್ಕ ಮಾಡಲಾದ ವಿಮಾಪರಿಹಾರವು ವಿಮಾ ಸಂಸ್ಥೆಗಳ ಲಾಗಿನ್ ನಲ್ಲಿ ಲಭ್ಯವಾಗುತ್ತದೆ. ವಿಮಾ ಸಂಸ್ಥೆಗಳು ಸಂರಕ್ಷಣೆ ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಿದ ಪ್ರತಿ ಹೆಕ್ಟೇರ್ ವಾರು ವಿಮಾ ಮೊತ್ತವನ್ನು ಒಂದು ವಾರದೊಳಗೆ ಅನುಮೋದಿಸುವುದು. ಒಂದು ವೇಳೆ ವಿಮಾ ಮೊತ್ತದಲ್ಲಿ ವ್ಯತ್ಯಾಸವಿದ್ದಲ್ಲಿ ಒಂದು ವಾರದೊಳಗೆ ಆಕ್ಷೇಪಣೆ ಸಲ್ಲಿಸುವುದು. ತಪ್ಪಿದ್ದಲ್ಲಿ ವಿಮಾ ಮೊತ್ತವು ಸ್ವಯಂ ಅನುಮೋದನೆಯಾಗುತ್ತದೆ. ಪ್ರತಿ ಹೆಕ್ಟೇರ್ ವಾರು ವಿಮಾ ಮೊತ್ತದ ಅನುಮೋದನೆ/ ಸ್ವಯಂ ಅನುಮೋದನೆ ದಿನಾಂಕದಿಂದ ಎರಡು (2) ವಾರಗಳೊಳಗೆ ಅಥವಾ ಸಂರಕ್ಷಣೆ ತಂತ್ರಾಂಶದಲ್ಲಿ ಪ್ರತಿ ಹೆಕ್ಟೇರ್ ವಾರು ವಿಮಾ ಮೊತ್ತವನ್ನು ಲೆಕ್ಕಾಚಾರ ಮಾಡಿದ ದಿನಾಂಕದಿಂದ ಗರಿಷ್ಠ 30 ದಿನಗಳೊಳಗೆ ಕ್ಲೇಮ್ ಅನ್ನು ಇತ್ಯರ್ಥಪಡಿಸಬೇಕು. ನಿರ್ದಿಷ್ಟ ಅವಧಿಯೊಳಗೆ ಕ್ಲೇಮ್ ವಿತರಣೆಯಾಗದಿದ್ದಲ್ಲಿ, ವಿಮಾ ಸಂಸ್ಥೆಗಳು ರೈತರಿಗೆ ವಾರ್ಷಿಕ 12% ಬಡ್ಡಿದರದೊಂದಿಗೆ ವಿಮಾ ಪರಿಹಾರ ಪಾವತಿಸತಕ್ಕದ್ದು.

24. ಯೋಜನೆಯ ಅನುಷ್ಠಾನಕ್ಕಾಗಿ ಕೈಗೊಳ್ಳಲಾಗುವ ಪ್ರಚಾರ, ಪ್ರಕಟಣೆ ಮತ್ತು ತರಬೇತಿ ನೀಡುವಲ್ಲಿ ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಮತ್ತು ವಿಮಾ ಸಂಸ್ಥೆಗಳು, ಆರ್ಥಿಕ ಸಂಸ್ಥೆಗಳು ಪರಸ್ಪರ ಸಹಕಾರ ನೀಡಬೇಕು. ವಿಮಾ ಸಂಸ್ಥೆಗಳು ಪ್ರತಿ ಕ್ಲಸ್ಟರ್ ನ ನೋಂದಾಯಿತ ಬೆಳೆಗಳ ಕನಿಷ್ಠ ಶೇಕಡ 50 ರಷ್ಟು ಪ್ರದೇಶ ನೋಂದಣಿ ಮಾಡಲು ಶ್ರಮಿಸುವುದು. ಈ ಕುರಿತು ಮಾಡಿದ ವೆಚ್ಚ ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ವಿವರವಾದ ವರದಿ ಸಲ್ಲಿಸುವುದು.

25. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅನುಷ್ಠಾನ ವಿಮಾ ಸಂಸ್ಥೆಗಳು ಬೆಳೆ ವಿಮಾ ಯೋಜನೆಯಲ್ಲಿ ಭಾಗವಹಿಸಲಿರುವ ವಿವಿಧ ಸಂಸ್ಥೆಗಳ ಜೊತೆಯಲ್ಲಿ ಸಮನ್ವಯ ಸಾಧಿಸತಕ್ಕದ್ದು.

26. ಸಂಬಂಧಪಟ್ಟ ವಿಮಾ ಸಂಸ್ಥೆಗಳು ಈ ಯೋಜನೆಯನ್ನು ಜಾರಿಯಲ್ಲಿರುವ ಮಾರ್ಗಸೂಚಿಗಳನ್ವಯ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹೊರಡಿಸಿರುವ/ ಹೊರಡಿಸುವ ಆದೇಶಗಳು, ಸುತ್ತೋಲೆಗಳು, ಟೆಂಡರ್ ಪ್ರಕಟಣೆ ಹಾಗೂ ಕಾರ್ಯಾದೇಶಗಳಲ್ಲಿ ವಿಧಿಸಿದ ಷರತ್ತುಗಳು ಮತ್ತು ನಿಬಂಧನೆಗಳನ್ವಯ ಅನುಷ್ಠಾನಗೊಳಿಸುವುದು.

27. ಯಾವುದೇ ವಿಮಾ ಮೊತ್ತ, ಕ್ಲೇಮ್/sub–standard ಕ್ಲೇಮ್ ಪಾವತಿಗೆ ಸಂಬಂಧಿಸಿದಂತೆ ವಿವಾದಗಳು ಇದ್ದಲ್ಲಿ ಮಾರ್ಗಸೂಚಿ ಅನ್ವಯ, State Redressal Grievance Committee ಹಾಗೂ ಕೃಷಿ ಮಂತ್ರಾಲಯದ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ, ಭಾರತ ಸರ್ಕಾರದ ಮೂಲಕ ಇತ್ಯರ್ಥಪಡಿಸಲಾಗುವುದು.

28. ವಿಮಾ ಘಟಕಗಳು, ಗ್ರಾಮ ಪಂಚಾಯತಿ / ನಗರ ಸ್ಥಳೀಯ ಸಂಸ್ಥೆಗಳು ಆಗಿರುವುದರಿಂದ ಹೊಸದಾಗಿ ಸೃಜಿಸಿರುವ/ ಸೃಜಿಸಲಾಗುವ ತಾಲ್ಲೂಕುಗಳಿಂದಾಗಿ ವಿಮಾ ಘಟಕದ

ವ್ಯಾಪ್ತಿಯಲ್ಲಿ, ಹೊಸದಾಗಿ ಈ ಕುರಿತು ಅಧಿಸೂಚನೆ ಹೊರಡಿಸದೇ, ಯಾವುದೇ ಬದಲಾವಣೆ ಆಗುವುದಿಲ್ಲ.

29. ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ 2025-26ರ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಅನುಷ್ಠಾನಗೊಳಿಸಬೇಕಾಗಿರುವ ಜಿಲ್ಲಾವಾರು, ತಾಲ್ಲೂಕುವಾರು ವಿಮಾಘಟಕವಾರು ಬೆಳೆ ಸಂಯೋಜನೆಗಳಿಗೆ 2023-24 ಮತ್ತು 2024-25ರ ಅಧಿಸೂಚನೆಯಲ್ಲಿ ವಿಧಿಸಿದಂತಹ ಸಂಬಂಧಿತ ಷರತ್ತು ಹಾಗು ನಿಬಂಧನೆಗಳು ಮುಂದುವರೆಯುತ್ತದೆ.

30. ಮೇಲೆ ಓದಲಾದ (16) ರ ಪತ್ರದಂತೆ 2025-26ನೇ ಸಾಲಿಗೆ M/s. KSHEMA ಸಂಸ್ಥೆಯು ಅನುಷ್ಠಾನಗೊಳಿಸುತ್ತಿರುವ ಎಲ್ಲಾ 11 (ಬಳ್ಳಾರಿ, ಉತ್ತರಕನ್ನಡ, ಚಾಮರಾಜನಗರ, ಮಂಡ್ಯ, ಬೆಂಗಳೂರು ಗ್ರಾಂಮಾಂತರ, ಚಿತ್ರದುರ್ಗ, ಮೈಸೂರು, ರಾಯಚೂರು, ಕಲಬುರ್ಗಿ, ಬೀದರ್ ಮತ್ತು ಕೊಡಗು) ಜಿಲ್ಲೆಗಳಲ್ಲಿ ಅಸಮರ್ಪಕ ಅನುಷ್ಠಾನದ ಕುರಿತು ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಈ ಬಗ್ಗೆ ಸಂಸ್ಥೆಯಿಂದ ಸೂಕ್ತ ಕಾರಣ ಪಡೆದ ನಂತರ ಮತ್ತು ಉನ್ನತ ಮಟ್ಟದಲ್ಲಿ ತೀರ್ಮಾನವಾದ ನಂತರ ಸದರಿ ಜಿಲ್ಲೆಗಳಿಗೆ ಪ್ರತ್ಯೇಕ ಆದೇಶ ಹೊರಡಿಸುವುದನ್ನು ಕಾಯ್ದಿರಿಸಿ, ಉಳಿಕೆ ಜಿಲ್ಲೆಗಳಿಗೆ ಅನ್ವಯವಾಗುವಂತೆ ಪ್ರಸ್ತುತ ಅಧಿಸೂಚನೆ ಹೊರಡಿಸಲಾಗಿದೆ.

31. ಸದರಿ ಯೋಜನೆಯಡಿ ಅನುಷ್ಠಾನ ಬೆಳೆ ವಿಮಾ ಸಂಸ್ಥೆಗಳಿಗೆ ರಾಜ್ಯ ಪಾಲಿನ ವಿಮಾ ಮೊತ್ತವನ್ನು ಕೃಷಿ ಇಲಾಖೆಯ ಯೋಜನೆಯಾದ "ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ" ಲೆಕ್ಕ ಶೀರ್ಷಿಕೆ:2401-00-110-0-07 ರಲ್ಲಿ ಕೃಷಿ ಇಲಾಖೆಗೆ 2025-26 ನೇ ಸಾಲಿನಲ್ಲಿ ಒದಗಿಸಲಾಗುವ ಅನುದಾನದಿಂದ ಭರಿಸತಕ್ಕದ್ದು.

32. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 213 ವೆಚ್ಚ-4/2023, ದಿನಾಂಕ:11.06.2025 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

23/06/2025

(ಶ್ರೀಲಕ್ಷ್ಮಿ ಹೆಚ್.ವಿ)
ಪೀಠಾಧಿಕಾರಿ
(ಯೋಜನೆ, ಸ್ಥಿತಿಗತಿ ಮತ್ತು ರವಾನೆ ಶಾಖೆ)
ತೋಟಗಾರಿಕೆ ಇಲಾಖೆ

**ರವರಿಗೆ,**

1. ಪ್ರಧಾನ ಮಹಾಲೇಖಪಾಲರು (ಎ&ಇ)/(ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.

5. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.

6. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

7. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

8. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ, ಯಲಹಂಕ, ಬೆಂಗಳೂರು – (ನಿರ್ದೇಶಕರು ತೋಟಗಾರಿಕೆ ಇಲಾಖೆ ಮುಖಾಂತರ).

9. ಕನ್ವೀನರ್, ರಾಜ್ಯ ಮಟ್ಟದ ಬ್ಯಾಂಕರ್ ಗಳ ಸಮಿತಿ (SLBC), ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ಸಂಬಂಧಪಟ್ಟ ಎಲ್ಲಾ ಬ್ಯಾಂಕ್ ಗಳು ಮತ್ತು ಆರ್ಥಿಕ ಸಂಸ್ಥೆಗಳಿಗೆ ಅಧಿಸೂಚನೆ ನೀಡಲು.

10. ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು

11. ವ್ಯವಸ್ಥಾಪಕ ನಿರ್ದೇಶಕರು, ಕೆ ಎಸ್ ಸಿ ಅಪೆಕ್ಸ್ ಬ್ಯಾಂಕ್, ಚಾಮರಾಜಪೇಟೆ, ಬೆಂಗಳೂರು ರವರಿಗೆ ಗುರುತಿಸುತ್ತಾ ಸಂಬಂಧಪಟ್ಟ ಎಲ್ಲಾ ಸಹಕಾರ ಬ್ಯಾಂಕ್ ಗಳು ಮತ್ತು ಆರ್ಥಿಕ ಸಂಸ್ಥೆಗಳಿಗೆ ಅಧಿಸೂಚನೆ ನೀಡಲು.

12. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು – (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).

13. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).

14. ಎಲ್ಲಾ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).

15. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು-(ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).

16. ಎಲ್ಲಾ ಲೀಡ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).

17. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು- (ಅಪೆಕ್ಸ್ ಬ್ಯಾಂಕ್‌ನ ಮುಖಾಂತರ).

18. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು –( ಎಸ್.ಎಲ್.ಬಿ.ಸಿ. ಮುಖಾಂತರ).

19. ಎಲ್ಲಾ ನೋಡಲ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).

20. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.

21. ವ್ಯವಸ್ಥಾಪಕ ನಿರ್ದೇಶಕರು, KSHEMA ಜನರಲ್ ಇನ್ಶೂರೆನ್ಸ್ ಕಂಪನಿ.

22. ವ್ಯವಸ್ಥಾಪಕ ನಿರ್ದೇಶಕರು, HDFC ಎರ್ಗೋ ಜನರಲ್ ಇನ್ಶೂರೆನ್ಸ್ ಕಂಪನಿ.

23. ವ್ಯವಸ್ಥಾಪಕ ನಿರ್ದೇಶಕರು, TATA AIG ಜನರಲ್ ಇನ್ಶೂರೆನ್ಸ್ ಕಂಪನಿ.

24. ವ್ಯವಸ್ಥಾಪಕ ನಿರ್ದೇಶಕರು, IFFCO-TOKIO ಜನರಲ್ ಇನ್ಶ್ಯುರೆನ್ಸ್ ಕಂಪನಿ.

25. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.

26. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.

27. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.

28. ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ.

29. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

30. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

31. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

32. ಸರ್ಕಾರದ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.

33. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.

34. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ತೋಇ HORTI/676/HMM/2022, dated 23/6/2025

## ಅನುಬಂಧ-3

**2025-26 ನೇ ಸಾಲಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ ಯಡಿ (RWBCIS) ಬೆಳೆವಾರು ನೋಂದಣಿಗೆ ಅಂತಿಮ ದಿನಾಂಕಗಳ ವಿವರ.**

| ಕ್ರ.ಸಂ | ಹಂಗಾಮು | ಜಿಲ್ಲೆ | ಬೆಳೆಗಳು | ನೋಂದಣಿಗೆ ಅಂತಿಮ ದಿನಾಂಕ ಮುಕ್ತಾಯ |
|---|---|---|---|---|
| 1 | ಮುಂಗಾರು | ಬಾಗಲಕೋಟೆ | ದ್ರಾಕ್ಷಿ | 31-07-2025 |
| 2 | ಮುಂಗಾರು | ಬಾಗಲಕೋಟೆ | ದಾಳಿಂಬೆ | 31-07-2025 |
| 3 | ಮುಂಗಾರು | ಬೆಳಗಾವಿ | ಹಸಿ ಮೆಣಸಿನಕಾಯಿ | 31-07-2025 |
| 4 | ಮುಂಗಾರು | ಬೆಳಗಾವಿ | ದ್ರಾಕ್ಷಿ | 31-07-2025 |
| 5 | ಮುಂಗಾರು | ಬೆಳಗಾವಿ | ಮಾವು | 31-07-2025 |
| 6 | ಮುಂಗಾರು | ಬೆಳಗಾವಿ | ದಾಳಿಂಬೆ | 31-07-2025 |
| 7 | ಮುಂಗಾರು | ಬೆಂಗಳೂರು | ದ್ರಾಕ್ಷಿ | 31-07-2025 |
| 8 | ಮುಂಗಾರು | ಬೆಂಗಳೂರು | ಮಾವು | 31-07-2025 |
| 9 | ಮುಂಗಾರು | ಚಿಕ್ಕಬಳ್ಳಾಪುರ | ದ್ರಾಕ್ಷಿ | 31-07-2025 |
| 10 | ಮುಂಗಾರು | ಚಿಕ್ಕಬಳ್ಳಾಪುರ | ಮಾವು | 31-07-2025 |
| 11 | ಮುಂಗಾರು | ಚಿಕ್ಕಬಳ್ಳಾಪುರ | ದಾಳಿಂಬೆ | 31-07-2025 |
| 12 | ಮುಂಗಾರು | ಚಿಕ್ಕಮಗಳೂರು | ಅಡಿಕೆ | 31-07-2025 |
| 13 | ಮುಂಗಾರು | ಚಿಕ್ಕಮಗಳೂರು | ಹಸಿ ಮೆಣಸಿನಕಾಯಿ | 31-07-2025 |
| 14 | ಮುಂಗಾರು | ಚಿಕ್ಕಮಗಳೂರು | ಮಾವು | 31-07-2025 |
| 15 | ಮುಂಗಾರು | ಚಿಕ್ಕಮಗಳೂರು | ಕರಿಮೆಣಸು | 31-07-2025 |
| 16 | ಮುಂಗಾರು | ಚಿಕ್ಕಮಗಳೂರು | ದಾಳಿಂಬೆ | 31-07-2025 |
| 17 | ಮುಂಗಾರು | ದಕ್ಷಿಣ ಕನ್ನಡ | ಅಡಿಕೆ | 31-07-2025 |
| 18 | ಮುಂಗಾರು | ದಕ್ಷಿಣ ಕನ್ನಡ | ಕರಿಮೆಣಸು | 31-07-2025 |
| 19 | ಮುಂಗಾರು | ಗದಗ | ದ್ರಾಕ್ಷಿ | 31-07-2025 |
| 20 | ಮುಂಗಾರು | ಗದಗ | ಮಾವು | 31-07-2025 |
| 21 | ಮುಂಗಾರು | ಗದಗ | ಪರಂಗಿ | 31-07-2025 |
| 22 | ಮುಂಗಾರು | ಗದಗ | ದಾಳಿಂಬೆ | 31-07-2025 |
| 23 | ಮುಂಗಾರು | ಹಾವೇರಿ | ಅಡಿಕೆ | 31-07-2025 |
| 24 | ಮುಂಗಾರು | ಹಾವೇರಿ | ಹಸಿ ಮೆಣಸಿನಕಾಯಿ | 31-07-2025 |
| 25 | ಮುಂಗಾರು | ಹಾವೇರಿ | ಶುಂಠಿ | 31-07-2025 |
| 26 | ಮುಂಗಾರು | ಹಾವೇರಿ | ಮಾವು | 31-07-2025 |
| 27 | ಮುಂಗಾರು | ಕೊಪ್ಪಳ | ಹಸಿ ಮೆಣಸಿನಕಾಯಿ | 31-07-2025 |
| 28 | ಮುಂಗಾರು | ಕೊಪ್ಪಳ | ದ್ರಾಕ್ಷಿ | 31-07-2025 |
| 29 | ಮುಂಗಾರು | ಕೊಪ್ಪಳ | ಮಾವು | 31-07-2025 |
| 30 | ಮುಂಗಾರು | ಕೊಪ್ಪಳ | ಪರಂಗಿ | 31-07-2025 |
| 31 | ಮುಂಗಾರು | ಕೊಪ್ಪಳ | ದಾಳಿಂಬೆ | 31-07-2025 |
| 32 | ಮುಂಗಾರು | ಶಿವಮೊಗ್ಗ | ಅಡಿಕೆ | 31-07-2025 |
| 33 | ಮುಂಗಾರು | ಶಿವಮೊಗ್ಗ | ಶುಂಠಿ | 31-07-2025 |
| 34 | ಮುಂಗಾರು | ಶಿವಮೊಗ್ಗ | ಮಾವು | 31-07-2025 |
| 35 | ಮುಂಗಾರು | ಶಿವಮೊಗ್ಗ | ಕರಿಮೆಣಸು | 31-07-2025 |
| 36 | ಮುಂಗಾರು | ವಿಜಯನಗರ | ಅಡಿಕೆ | 31-07-2025 |
| 37 | ಮುಂಗಾರು | ವಿಜಯನಗರ | ಹಸಿ ಮೆಣಸಿನಕಾಯಿ | 31-07-2025 |
| 38 | ಮುಂಗಾರು | ವಿಜಯನಗರ | ದಾಳಿಂಬೆ | 31-07-2025 |
| 39 | ಮುಂಗಾರು | ಯಾದಗೀರ | ಹಸಿ ಮೆಣಸಿನಕಾಯಿ | 31-07-2025 |
| 40 | ಮುಂಗಾರು | ಯಾದಗೀರ | ದ್ರಾಕ್ಷಿ | 31-07-2025 |
| 41 | ಮುಂಗಾರು | ಯಾದಗೀರ | ಪರಂಗಿ | 31-07-2025 |
| 42 | ಮುಂಗಾರು | ಯಾದಗೀರ | ದಾಳಿಂಬೆ | 31-07-2025 |
| 43 | ಹಿಂಗಾರು | ಬೆಳಗಾವಿ | ಹಸಿ ಮೆಣಸಿನಕಾಯಿ | 15-11-2025 |
| 44 | ಹಿಂಗಾರು | ಕೊಪ್ಪಳ | ಹಸಿ ಮೆಣಸಿನಕಾಯಿ | 15-11-2025 |
| 45 | ಮುಂಗಾರು | ದಾವಣಗೆರೆ | ಅಡಿಕೆ | 30-06-2025 |
| 46 | ಮುಂಗಾರು | ದಾವಣಗೆರೆ | ವೀಳ್ಯದ ಎಲೆ | 30-06-2025 |
| 47 | ಮುಂಗಾರು | ದಾವಣಗೆರೆ | ಮಾವು | 31-07-2025 |
| 48 | ಮುಂಗಾರು | ದಾವಣಗೆರೆ | ಕರಿಮೆಣಸು | 30-06-2025 |
| 49 | ಮುಂಗಾರು | ದಾವಣಗೆರೆ | ದಾಳಿಂಬೆ | 30-06-2025 |
| 50 | ಮುಂಗಾರು | ಉಡುಪಿ | ಅಡಿಕೆ | 30-06-2025 |
| 51 | ಮುಂಗಾರು | ಉಡುಪಿ | ಕರಿಮೆಣಸು | 30-06-2025 |
| 52 | ಮುಂಗಾರು | ಕೋಲಾರ | ಮಾವು | 31-07-2025 |
| 53 | ಮುಂಗಾರು | ಹಾಸನ | ಅಡಿಕೆ | 30-06-2025 |
| 54 | ಮುಂಗಾರು | ಹಾಸನ | ಮಾವು | 31-07-2025 |